# Karnataka PDO

## Previous Year Paper 2013

# ಪ್ರಶ್ನೆ ಪತ್ರಿಕೆ

**ಶ್ರೇಣಿ S**

# ಸೂಚನೆಗಳು

**ಉತ್ತರಿಸುವ ಮೊದಲು ಎಲ್ಲ ಸೂಚನೆಗಳನ್ನು ಸರಿಯಾಗಿ ಓದಿ**

- ಈ ಪ್ರಶ್ನೆ ಪತ್ರಿಕೆಯು ಕನ್ನಡ ಮತ್ತು ಆಂಗ್ಲ ಭಾಷೆಯಗಳಲ್ಲಿ ಭಾಷಾಂತರಗೊಂಡಿದೆ.
- ಹೆಚ್ಚಿನ ಪ್ರಶ್ನೆ ಪತ್ರಿಕೆ ಅಥವಾ ಉತ್ತರಿಸುವ ಹಾಳೆಗಳಾಗಲಿ ದೊರೆಯುವುದಿಲ್ಲ. ತಪ್ಪುಗಳನ್ನು ಮಾಡಬೇಡಿ. ಏನೇ ಆದರೂ ಬದಲಿ ಪತ್ರಿಕೆ **ನೀಡಲಾಗದು**. ಯಾವುದೇ ಕಾರಣಕ್ಕೂ ಬದಲಾವಣೆ ಮಾಡಲಾಗುವುದಿಲ್ಲ.
- ಈ ಪ್ರಶ್ನೆ ಪತ್ರಿಕೆಯು ಒಟ್ಟು 150 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಇದರಲ್ಲಿ 5 ವಿಭಾಗಗಳಿದ್ದು ಗಣಕಯಂತ್ರದ ಬಗೆಗಿನ ಜ್ಞಾನ ಸಾಕ್ಷರತೆ, ಸಾಮಾನ್ಯ ಆಂಗ್ಲ, ಸಾಮಾನ್ಯ ಕನ್ನಡ, ಸಾಮಾನ್ಯ ಜ್ಞಾನ ಮತ್ತು ಗ್ರಾಮೀಣ ಅಭಿವೃದ್ಧಿ ಇದ್ದು ಪ್ರತಿಯೊಂದು ವಿಭಾಗವೂ 30 ಪ್ರಶ್ನೆಗಳನ್ನೊಳಗೊಂಡಿದೆ.
- ಪ್ರತಿ ಪ್ರಶ್ನೆಯೂ ನಾಲ್ಕು ಆಯ್ಕೆಗಳನ್ನು ಹೊಂದಿರುತ್ತದೆ. ಇವುಗಳಲ್ಲಿ ಒಂದು ಮಾತ್ರ ಸರಿಯಾದ ಉತ್ತರವಿರುತ್ತದೆ. ತಪ್ಪು ಆಯ್ಕೆಯನ್ನು ಅಥವಾ ಒಂದಕ್ಕಿಂತ ಹೆಚ್ಚು ಆಯ್ಕೆಗಳನ್ನು ಮಾಡಿದಲ್ಲಿ ಉತ್ತರವನ್ನು ಅನರ್ಹಗೊಳಿಸಲಾಗುವುದು.
- ಈ ಪರೀಕ್ಷೆಯ ಕಾಲಾವಧಿ 3 ಘಂಟೆಗಳು.
- ಎಲ್ಲ ಪ್ರಶ್ನೆಗಳನ್ನು ಕಡ್ಡಾಯವಾಗಿ ಉತ್ತರಿಸಬೇಕು. ತಪ್ಪಾಗಿ ಉತ್ತರಿಸಿದಲ್ಲಿ ಅಂಕಗಳನ್ನು ಕಳೆಯಲಾಗುವುದಿಲ್ಲ.
- ಸೂಚನೆಗಳನ್ನು ನೀಡುವವರೆಗೆ ಪ್ರಶ್ನೆ ಪತ್ರಿಕೆಗಳನ್ನು ತೆಗೆಯಬಾರದು.
- ಪ್ರಶ್ನೆ ಪತ್ರಿಕೆಯ ಖಾಲಿ ಹಾಳೆಗಳಲ್ಲಿರುವ ಸ್ಥಳಗಳಲ್ಲಿ ಮಾತ್ರ ಕಚ್ಚಾ ಕೆಲಸ ಮಾಡಿಕೊಳ್ಳಿ ಇದಕ್ಕಾಗಿ ಹೆಚ್ಚಿನ ಹಾಳೆಗಳನ್ನು ನೀಡಲಾಗದು.
- ಪ್ರವೇಶ ಪತ್ರದ ಕ್ರಮ ಸಂಖ್ಯೆಗಳನ್ನು ಸ್ಪಷ್ಟವಾಗಿ ನಮೂದಿಸಿ. ಕೊಟ್ಟಿರುವ ನಿಗದಿತ ಜಾಗದಲ್ಲಿಯೇ ಸಹಿಮಾಡಿ. ಇವುಗಳಲ್ಲಿ ಯಾವ ತಪ್ಪುಗಳನ್ನೂ ಮಾಡಬೇಡಿ.
- ಸರಿಯಾದ ಉತ್ತರವನ್ನು ಕಪ್ಪು ಗುರುತು ಮಾಡಿ, ಉತ್ತರ ಪತ್ರಿಕೆಯಲ್ಲಿ ಕಪ್ಪಾಗಿ ವೃತ್ತಾಕಾರ ಹಾಕಿ ಗುರುತಿಸಬೇಕು.




- ಪ್ರಶ್ನೆ ಪತ್ರಿಕೆಗಳ ಕ್ರಮ ಸಂಖ್ಯೆಗಳನ್ನು P, Q, R ಮತ್ತು S ಆಂಗ್ಲಾಕ್ಷರಗಳಿಂದ ಗುರಿತಿಸಿದೆ. ನೀವು ಉಪಯೋಗಿಸಿದ ಉತ್ತರ ಪತ್ರಿಕೆಗಳಲ್ಲಿ ಕ್ರಮ ಸಂಖ್ಯೆಯ ಆಂಗ್ಲಾಕ್ಷರಗಳನ್ನು ನಿಖರವಾಗಿ ನಮೂದಿಸಿ. ಇಲ್ಲಿ ಯಾವುದೇ ತಪ್ಪುಗಳು ಕಂಡು ಬಂದಲ್ಲಿ ಅನರ್ಹಗೊಳಿಸಲಾಗುವುದು.
- ಪ್ರಶ್ನೆ ಪತ್ರಿಕೆಯಿಂದ ಯಾವುದೇ ಹಾಳೆಗಳನ್ನು ತೆಗೆಯಬೇಡಿ.
- ಪರೀಕ್ಷೆ ಪ್ರಾರಂಭವಾದ ಒಂದು ಘಂಟೆಯೊಳಗೆ (ನಿಯಮನುಸಾರ ಎಲ್ಲ ಕ್ರಮಗಳನ್ನು ಪೂರ್ಣಗೊಳಿಸುವವರೆಗೊ) ಯಾರೂ ಪರೀಕ್ಷೆ ಕೊಠಡಿಯಿಂದ ಹೊರ ಹೋಗಲು ಅನುಮತಿ ಇರುವುದಿಲ್ಲ.
- ಪರೀಕ್ಷೆ ಮುಗಿದ ನಂತರ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಪ್ರತಿಯನ್ನು ನಿಮ್ಮ ಹತ್ತಿರ ಇಟ್ಟುಕೊಳ್ಳಬಹುದು.
- ಪರೀಕ್ಷಾ ವೇಳೆಯಲ್ಲಿ ಯಾವುದೇ ಸಂದೇಹಗಳನ್ನು ಪರಿಹರಿಸಿಕೊಳ್ಳಲು ಅವಕಾಶವಿರುವುದಿಲ್ಲ. ಕ್ಯಾಲ್‌ಕುಲೇಟರ್, ಮೊಬೈಲ್, ಪೇಜರ್ ಮತ್ತು ಯಾವುದೇ ರೀತಿಯ ಉಪಕರಣಗಳನ್ನು ಪರೀಕ್ಷಾ ಕೊಠಡಿಯ ಒಳಗೆ ತರಲು ಬಿಡುವುದಿಲ್ಲ.

Adda247

# ಸಾಮಾನ್ಯ ಜ್ಞಾನ

1. ಇಂಡಿಯನ್ ನ್ಯಾಶನಲ್ ಸ್ಯಾಟಿಲೈಟ್ ಅನ್ನು ಸಂಕ್ಷಿಪ್ತವಾಗಿ ಸೂಚಿಸುವ ಅಕ್ಷರಗಳು ಯಾವುವು
   - A. ಐ.ಎನ್.ಟಿ.ಇ.ಎಲ್.ಎಸ್.ಎ.ಟಿ. (INTELSAT)
   - B. ಐ.ಎನ್.ಎಸ್.ಎ.ಟಿ. (INSAT)
   - C. ಐ.ಎನ್.ಎಸ್. (INS)
   - D. ಐ.ಎನ್.ಎಸ್.ಟಿ. (INST)

2. ಐ.ಸಿ.ಎ.ಆರ್. (ICAR) ಅಂದರೆ
   - A. ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್‌ಚರಲ್ ರಿಸರ್ಚ್
   - B. ಇಂಟರ್‌ನ್ಯಾಷನಲ್ ಕೌನ್ಸಿಲ್ ಆಫ್ ಏರೋಸ್ಪೇಸ್ ರಿಸರ್ಚ್
   - C. ಇಂಟರ್‌ನ್ಯಾಷನಲ್ ಕೌನ್ಸಿಲ್ ಆಫ್ ಅಪ್ಲೈಡ್ ರಿಸರ್ಚ್
   - D. ಇಂಡಿಯನ್ ಕಲ್‌ಚರಲ್ ಅಂಡ್ ಅಕೆಡೆಮಿಕ್ ರಿಸರ್ಚ್

3. ವಿಶ್ವ ಪರಿಸರ ದಿನವನ್ನು ಪ್ರತಿ ವರ್ಷ ಈ ದಿನದಂದು ಆಚರಿಸಲಾಗುವುದು
   A. ಮೇ 31 B. ಜುಲೈ 4 C. ಜೂನ್ 5 D. ಜೂನ್ 4

4. ಅರಣ್ಯ ಸಂಶೋಧನಾ ಸಂಸ್ಥೆ ಈ ಸ್ಥಳದಲ್ಲಿದೆ
   A. ಚೆನ್ನೈ B. ಹೈದರಾಬಾದ್ C. ಡೆಹರಾಡೂನ್ D. ಪುಣೆ


5. ಡಾ. ಅಬ್ದುಲ್ ಪಿ.ಜೆ. ಕಲಾಮ್ ಅವರು ಈ ಗ್ರಂಥವನ್ನು ರಚಿಸಿದ್ದಾರೆ
   - A. ವಿಂಗ್ಸ್ ಆಫ್ ಫ್ಲೈಟ್
   - B. ವಿಂಗ್ಸ್ ಆಫ್ ಫೇಮ್
   - C. ವಿಂಗ್ಸ್ ಆಫ್ ಫೈರ್
   - D. ವಿಂಗ್ಸ್ ಆಫ್ ಫ್ಲೇಮ್

6. ಕರ್ನಾಟಕ ಕುಲಪುರೋಹಿತ ಎಂದು ನಾಮಾಂಕಿತರಾದವರು
   - A. ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್
   - B. ಶ್ರೀ ಆಲೂರು ವೆಂಕಟರಾಯರು
   - C. ಶ್ರೀ ನರಸಿಂಹಾಚಾರ್ಯರು
   - D. ಶ್ರೀ ಕುವೆಂಪು

7. ಭಾರತದಲ್ಲಿ ಶೇ 40 ರಷ್ಟು ಮುಸುಕಿನ ಜೋಳ ಬೆಳೆಯುವುದು
   - A. ತಮಿಳುನಾಡು ಮತ್ತು ಕರ್ನಾಟಕ
   - B. ಆಂಧ್ರ ಪ್ರದೇಶ ಮತ್ತು ಕೇರಳ
   - C. ತಮಿಳುನಾಡು ಮತ್ತು ಆಂಧ್ರ ಪ್ರದೇಶ
   - D. ಆಂಧ್ರ ಪ್ರದೇಶ ಮತ್ತು ಕರ್ನಾಟಕ

8. 25 ತಂತ್ರಜ್ಞರು, 20 ವಿಜ್ಞಾನಿಗಳು, 18 ಉಪಾಧ್ಯಾಯರು ಮತ್ತು 12 ವ್ಯವಸ್ಥಾಪಕರು ಒಂದು ಪ್ರದರ್ಶನಕ್ಕೆ ಹೋಗಿ ಒಟ್ಟಾಗಿ 266000 ರೂಪಾಯಿ ಖರ್ಚುಮಾಡಿದರು. 5 ಜನ ತಂತ್ರಜ್ಞರು ಖರ್ಚು ಮಾಡಿದಷ್ಟು ಹಣವನ್ನು 4 ಜನ ವಿಜ್ಞಾನಿಗಳು ವ್ಯಯಿಸಿದರು. 12 ಜನ ವಿಜ್ಞಾನಿಗಳು ಖರ್ಚುಮಾಡಿದಷ್ಟು ಹಣವನ್ನು 9 ಜನ ಉಪಾಧ್ಯಾಯರು ವ್ಯಯಿಸಿದರು ಮತ್ತು 6 ಜನ ಉಪಾಧ್ಯಾಯರು ಖರ್ಚುಮಾಡಿದಷ್ಟು ಹಣವನ್ನು 8 ಜನ ವ್ಯವಸ್ಥಾಪಕರು ವ್ಯಯಿಸಿದರು. ಪ್ರತಿಯೊಂದು ಗುಂಪಿನವರು ಒಂದೇ ಮೊತ್ತದ ಹಣವನ್ನು ಖರ್ಚುಮಾಡಿದ್ದಲ್ಲಿ ಒಬ್ಬ ವಿಜ್ಞಾನಿ ಎಷ್ಟು ಹಣ ಖರ್ಚು ಮಾಡಿದ್ದಾರೆ?
   A. ರೂ: 2800 B. ರೂ: 3500 C. ರೂ: 3600 D. ರೂ: 4200


9. ಡೈಸಿನ ನಾಲ್ಕು ರೂಪಗಳು ಈ ಚಿತ್ರದಂತಿದ್ದರೆ, 4ರ ಹಿಂದಿನ ಸಂಖ್ಯೆ ಯಾವುದು?




A. ಎರಡು B. ಐದು C. ಮೂರು D. ಒಂದು

Adda247

10. ಸರಿಯಾದ ಚಿತ್ರವನ್ನು ಆಯ್ದು ಉಳಿದ ಚಿತ್ರವನ್ನು ಪೂರ್ಣಗೊಳಿಸಿ






11. ಸುನಾಮಿಯು ಉಂಟಾಗಲು ಇದು ಕಾರಣವಾಗಿದೆ
   A. ಬಿರುಗಾಳಿ (ಚಂಡಮಾರುತ)
   B. ಉಲ್ಕೆಯ ಪಾತ
   C. ಭೂಕಂಪ
   D. ಚಂದ್ರನ ಸಾಂದ್ರತೆಯಲ್ಲಿ ಬದಲಾವಣೆ

12. ಸಮುದ್ರವು ಸಾಗರದಿಂದ ಈ ವಿಷಯಗಳಲ್ಲಿ ಭಿನ್ನವಾಗಿವೆ
   A. ಅದು ಭಾಗಶ: ಭೂಮಿಯಿಂದ ಆವೃತವಾಗಿದೆ
   B. ಅದು ನದಿಗಿಂತ ಸ್ವಲ್ಪ ದೊಡ್ಡದಾಗಿದೆ
   C. ಅದರಲ್ಲಿ ನಿಗದಿತ ಅಳತೆಯ ನೀರು ಇರುವುದಿಲ್ಲ
   D. ಅದಕ್ಕೆ ಯಾವ ಎಲ್ಲೆಯೂ ಇರುವುದಿಲ್ಲ

13. ಲೀನಾ, ಮನು, ನೀರಜ್, ಒಮರ್, ಪಾಲ್ ಮತ್ತು ಕೈಸರ್ ಎಂಬುವರು ಆರು ಜನ ಸ್ನೇಹಿತರು. ಲೀನಾ ಎಂಬುವವಳು ಮನುಗಿಂತ ಹಿರಿಯಳು ಆದರೆ ನೀರಜ್ ಗಿಂತ ಚಿಕ್ಕವಳು. ಒಮರ್ ಎಂಬುವನು ನೀರಜ್ ಮತ್ತು ಪಾಲ್ ಗಿಂತ ಕಿರಿಯವ. ಕೈಸೆರ್ ಎಂಬುವನು ಪಾಲ್ ಗಿಂತ ಹಿರಿಯವನು. ಕೆಳಗಿನ ಸಾಲುಗಳಲ್ಲಿ ಯಾವುದು ಸರಿಯಾದರೆ ಯಾರು ಅತ್ಯಂತ ಹಿರಿಯರೆಂದು ಪರಿಗಣಿಸಬಹುದು?
   A. ಒಮರ್ ಎಂಬುವನು ಮನು ಗಿಂತ ಕಿರಿಯ
   B. ನೀರಜ್ ಎಂಬುವನು ಪಾಲ್ ಗಿಂತ ಹಿರಿಯ
   C. ಕೈಸೆರ್ ಎಂಬುವನು ಲೀನಾ ಗಿಂತ ಹಿರಿಯ
   D. ಕೈಸೆರ್ ಮತ್ತು ಪಾಲ್ ಇವರ ಸರಾಸರಿ ವಯಸ್ಸು ನೀರಜ್‌ನ ವಯಸ್ಸಿಗಿಂತ ಜಾಸ್ತಿ

14. ಭಾರತದ ಸಂವಿಧಾನದಲ್ಲಿ ಎಷ್ಟು ವಿವರಣಾ ಪಟ್ಟಿಗಳಿವೆ (ನಿಬಂಧನೆಗಳು/schedule)
   A. 12   B. 20   C. 10   D. 25

15. ಸಂವಿಧಾನದ ಈ ನಿಬಂಧನೆಯಲ್ಲಿ(schedule), ಅಧಿಕಾರ, ಜವಾಬ್ದಾರಿ ಮತ್ತು ಪಂಚಾಯತಿಯ ಪ್ರಭಾವಗಳು ಇವೆ.
   A. 3   B. 4   C. 6   D. 11

16. ರಾಯಚೂರ್ ದಾವೋಬ್ ಎಂಬುದು ಈ ನದಿಗಳ ನಡುವೆ ಇದೆ
   A. ಕಾವೇರಿ ಮತ್ತು ಕೃಷ್ಣ
   B. ಕೃಷ್ಣ ಮತ್ತು ಗೋದಾವರಿ
   C. ಕಾವೇರಿ ಮತ್ತು ಗೋದಾವರಿ
   D. ಕೃಷ್ಣ ಮತ್ತು ತುಂಗಭದ್ರಾ

17. ಪ್ಲಾನಿಂಗ್ ಕಮಿಷನ್ ಭವಿಷ್ಯದ ಎಸ್ಟಿಮೇಟೆಡ್ ಪ್ರೋಗ್ರೆಸ್ ಅನ್ನು ಡಾಕ್ಯುಮೆಂಟ್ ರೂಪದಲ್ಲಿ ಪ್ರಸ್ತುತ ಪಡಿಸುತ್ತದೆ. ಅದನ್ನು ಹೀಗೆ ಕರೆಯುತ್ತಾರೆ
   A. ಇಂಡಿಯಾ ಮಿಷನ್ 2015
   B. ಇಂಡಿಯಾ ಮಿಷನ್ 2040
   C. ಇಂಡಿಯಾ ಮಿಷನ್ 2020
   D. ಇಂಡಿಯಾ ಮಿಷನ್ 2025

18. ಭಾರತದಲ್ಲಿ ಪ್ರಪ್ರಥಮವಾಗಿ ಪ್ರಕಾಶಿಸಲ್ಪಟ್ಟ ವಾರ್ತಾ ಪತ್ರಿಕೆ
   A. ಬಾಂಬೆ ಸಮಾಚಾರ್
   B. ಬೆಂಗಾಲ್ ಪ್ರತಿಕಾ
   C. ಬೆಂಗಾಲ್ ಗೆಜೆಟ್
   D. ದಿ ಹಿಂದೂ

19. ಸಂವಿಧಾನದ 356ನೇ ನಿಬಂಧನೆಯು ಮುಖ್ಯವಾದುದು ಏಕೆಂದರೆ ಅದು
   A. ಅಂತರರಾಜ್ಯ ಸಂಬಂಧಗಳ ಕುರಿತದ್ದಾಗಿದೆ
   B. ಪ್ರೆಸ್ ಗೆ ಸಂಬಂಧಿಸಿದ್ದು
   C. ಕೇಂದ್ರ ಮತ್ತು ರಾಜ್ಯಗಳಿಗೆ ಸಂಬಂಧಿಸಿದ್ದು
   D. ಬಡ್‌ಜೆಟ್ ಹಂಚಿಕೆ ಕುರಿತದ್ದು



Adda247

20. 1998ರ ನೋಬಲ್ ಪ್ರೈಜ್ ಫಾರ್ ಎಕನಾಮಿಕ್ಸ್ ಅನ್ನು ಅಮರ್ತ್ಯಸೇನ್ ಅವರ ಈ ಕೊಡುಗೆಗಾಗಿ ನೀಡಲಾಗಿದೆ

A. ವೆಲ್‌ಫೇರ್ ಎಕನಾಮಿಕ್ಸ್ B. ಮೈಕ್ರೊ ಎಕನಾಮಿಕ್ಸ್

C. ಡೆವಲಪ್‌ಮೆಂಟ್ ಎಕನಾಮಿಕ್ಸ್ D. ಇನ್‌ಸ್ಟಿಟ್ಯೂಷನಲ್ ಎಕನಾಮಿಕ್ಸ್

21. ದಾದಾಸಾಹೇಬ್ ಫಾಲ್ಕೆ ಪುರಸ್ಕಾರವು 1969 ರಲ್ಲಿ ಆರಂಭವಾದಾಗಿನಿಂದ ಕರ್ನಾಟಕದ ಎಷ್ಟು ಮಂದಿ ನಟರು ಪ್ರಶಸ್ತಿ ಪಡೆದಿದ್ದಾರೆ

A. 3 B. 2 C. 1 D. 0

22. ಭಾರತದ ಅತಿ ಕಡಿಮೆ ಜನನಿಬಿಡವಾದ ರಾಜ್ಯಗಳು

A. ಸಿಕ್ಕಿಂ, ಮಿಸೋರಾಂ, ಅರುಣಾಚಲಪ್ರದೇಶ, ಗೋವಾ

B. ನಾಗಾಲ್ಯಾಂಡ್, ಸಿಕ್ಕಿಂ, ಮಿಸೋರಾಂ, ಅರುಣಾಚಲಪ್ರದೇಶ

C. ಮೇಘಾಲಯ, ಮಣೀಪುರ, ಮಿಸೋರಾಂ, ಸಿಕ್ಕಿಂ

D. ಸಿಕ್ಕಿಂ, ಮಣೀಪುರ, ಅರುಣಾಚಲಪ್ರದೇಶ, ಗೋವಾ

23. ರಾಜೀವ್ ಗಾಂಧಿ ಖೇಲ್ ರತ್ನ ಪುರಸ್ಕಾರವನ್ನು ಈ ಕೆಳಗಿನವರಲ್ಲಿ ಯಾರು ಪಡೆದಿಲ್ಲ?

A. ವಿಶ್ವನಾಥನ್ ಆನಂದ್ B. ಪ್ರಕಾಶ್ ಪಡುಕೋಣೆ

C. ಪಂಕಜ ಅದ್ವಾನಿ D. ಸಚಿನ್ ತೆಂಡೂಲ್ಕರ್

24. ಪಡುವಲಪಾಯ ಮತ್ತು ಮೂಡಲಪಾಯ ಇವು ಯಾವ ನೃತ್ಯ ಪ್ರಾಕಾರದ ರೂಪಗಳು?

A. ಡೊಳ್ಳು ಕುಣಿತ B. ಕರಗ C. ಯಕ್ಷಗಾನ D. ಕೂಚಿಪುಡಿ

25. ರಿಸಿಷನ್ ಮತ್ತು ಡಿಪ್ರೆಷನ್ ಎಂಬುದು ಯಾವುದಕ್ಕೆ ಸಂಬಂಧಿಸಿವೆ

A. ಕಾಯಿಲೆ B. ವಾಹನದ ಬಿಡಿಭಾಗಗಳು

C. ಎಕನಾಮಿಕ್ ಸೈಕಲ್ D. ರಾಷ್ಟ್ರೀಯ ಆದ್ಯತೆಗಳು

26. ಯು.ಪಿ.ಎ. ಎಂಬುದು ಇದರ ಸಂಕ್ಷಿಪ್ತ ರೂಪ

A. ಯುನೈಟೆಡ್ ಪೊಲಿಟಿಕಲ್ ಅಲಿಯನ್ಸ್ B. ಯೂನಿಫೈಡ್ ಪ್ರೊಫೆಷನಲ್ ಅಸೋಸಿಯೇಷನ್

C. ಯುನೈಟೆಡ್ ಪೊಲಿಟಿಕಲ್ ಅಸೋಸಿಯೇಷನ್ D. ಯುನೈಟೆಡ್ ಪ್ರೋಗ್ರೆಸಿವ್ ಅಲಿಯನ್ಸ್

27. ಭಾರತದ ಅತಿದೊಡ್ಡ ವಸ್ತು ಸಂಗ್ರಹಾಲಯ ಯಾವುದು?

A. ಸಾಲಾರ್ ಜಂಗ್ ಮ್ಯೂಸಿಯಂ, ಹೈದರಾಬಾದ್ B. ನ್ಯಾಷನಲ್ ಮ್ಯೂಸಿಯಂ, ಡೆಲ್ಲಿ

C. ಇಂಡಿಯನ್ ಮ್ಯೂಸಿಯಂ, ಕೊಲ್‌ಕೊತ್ತಾ D. ಇವು ಯಾವುವೂ ಅಲ್ಲ

28. ಯುನೀಕ್ ಐಡೆಂಟಿಫಿಕೇಶನ್ ಡಾಟಾಬೇಸ್ ಅಥಾರಿಟಿ ಆಫ್ ಇಂಡಿಯದ ಈಗಿನ ಅಧ್ಯಕ್ಷರು

A. ನಾರಾಯಣ ಮೂರ್ತಿ B. ಅಜಿಂ ಪ್ರೇಮ್‌ಜಿ C. ನಂದನ್ ನೀಲೆಖಣಿ D. ರತನ್ ಟಾಟಾ

29. ಹ್ಯೂಮನ್ ಡೆವಲಪ್‌ಮೆಂಟ್ ಇಂಡೆಕ್ಸ್‌ನಲ್ಲಿ 2007-08ರಲ್ಲಿ ಭಾರತದ ಸ್ಥಾನವು ಇದಾಗಿದೆ

A. 112 B. 128 C. 137 D. 98

30. ಎನ್.ಎಸ್.ಎಸ್.ಓ. ಎಂಬುದು ಇದರ ಸಂಕ್ಷಿಪ್ತರೂಪ

A. ನ್ಯಾಷನೆಲ್ ಸೋಷಿಯಲ್ ಸರ್ವೀಸ್ ಆರ್ಗನೈಸೇಷನ್

B. ನ್ಯಾಷನೆಲ್ ಸೆಕ್ಯೂರಿಟಿ ಸರ್ವೀಸಸ್ ಆರ್ಗನೈಸೇಷನ್

C. ನ್ಯಾಷನೆಲ್ ಸ್ಯಾಂಪಲ್ ಸರ್ವೇ ಆರ್ಗನೈಸೇಷನ್

D. ನ್ಯಾಷನೆಲ್ ಸೈಂಟಿಫಿಕ್ ಸರ್ವೀಸ್ ಆರ್ಗನೈಸೇಷನ್



Adda247

## ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತಿ ರಾಜ್

31. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಭರವಸೆಯ ಕಾಯಿದೆ ಮತ್ತು ಯೋಜನೆಗೆ ನಿಧಿಯನ್ನು ನೀಡುವವರು:
    A. ವಿಶ್ವ ಬ್ಯಾಂಕ್
    B. ರಾಜ್ಯ ಸರ್ಕಾರ
    C. ಕೇಂದ್ರ ಸರ್ಕಾರ
    D. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸೇರಿ

32. ರಮೇಶನು REGS ಯೋಜನೆಯಲ್ಲಿ ಹುದ್ದೆಗಾಗಿ ಅರ್ಜಿ ಹಾಕಿದ ಮತ್ತು ಸ್ಥಳೀಯ ಕಾಲುವೆ ಕೆಲಸ ಅವನಿಗೆ ಸಿಕ್ಕಿತು. ಆದರೂ ಸಹ ಆ ಕಾರ್ಯಕ್ಕೆ ನಿಯೋಜಿತ ಸಂಸ್ಥೆಯು 20 ದಿನವಾದರೂ ಕೆಲಸವನ್ನು ಆರಂಭಿಸಲಿಲ್ಲ. ಇಂತಹ ಸಮಯದಲ್ಲಿ ರಮೇಶನು ಮೊದಲು ಕಾಣಬೇಕಾದವರು
    A. ಪ್ರೋಗ್ರಾಂ ಅಧಿಕಾರಿ
    B. ಜಿಲ್ಲಾ ಪ್ರೋಗ್ರಾಂ ಕೋಆರ್ಡಿನೇಟರ್
    C. ತಾಲ್ಲೂಕು ಪಂಚಾಯತ್ ಅಧ್ಯಕ್ಷ
    D. ಇವರಾರೂ ಅಲ್ಲ

33. ವೆಂಕಟೇಶನ ಕುಟುಂಬದಲ್ಲಿ ಅವನು, ಅವನ ಪತ್ನಿ, ಮತ್ತು ಮೂರು ಗಂಡು ಮಕ್ಕಳು ಕ್ರಮವಾಗಿ 24, 19 ಮತ್ತು 16 ವರ್ಷದವರು ಹಾಗು 45 ವಯಸ್ಸಿನ ಅವಿವಾಹಿತ ಸೋದರಿ ಇದ್ದಾರೆ. ಅವನ ಮೊದಲ ಮಗನು ಮದುವೆಯಾಗಿ ಅವನ ಪತ್ನಿ ಮತ್ತು ಮಗಳೊಡನೆ ಹತ್ತಿರದ ಗ್ರಾಮದಲ್ಲಿ ಅದೇ ಪಂಚಾಯತ್‌ನಲ್ಲಿದ್ದಾರೆ. ಈಗ ಯಾರ್‍ಯಾರು ವೆಂಕಟೇಶನ ಕುಟುಂಬದವರು REGS ಯೋಜನೆಯಡಿ ಕುಟುಂಬದವರೆಂದು ನೋಂದಾಯಿಸಿಕೊಳ್ಳಬಹುದು?
    A. ವೆಂಕಟೇಶ, ಅವನ ಪತ್ನಿ ಮತ್ತು ಅವಿವಾಹಿತ ಗಂಡು ಮಕ್ಕಳು
    B. ವೆಂಕಟೇಶ, ಅವನ ಪತ್ನಿ ಮತ್ತು ತಂಗಿ ಹಾಗು ಎರಡನೆ ಮಗ
    C. ವೆಂಕಟೇಶ, ಅವನ ಪತ್ನಿ, ತಂಗಿ ಮತ್ತು ಹಿರಿಯ ಇಬ್ಬರು ಗಂಡು ಮಕ್ಕಳು
    D. ಕುಟುಂಬದ ಎಲ್ಲರೂ

34. ರಘು ಮತ್ತು ಅವನ ಕುಟುಂಬವು ಜನವರಿಯಲ್ಲಿ ಮತ್ತೊಂದು ಜಿಲ್ಲೆಗೆ ಹೋಗಿ ಸೆಪ್ಟೆಂಬರ್‌ನಲ್ಲಿ ಹಿಂತಿರುಗಿದರು. ಅವನು REGSನಲ್ಲಿ ನೋಂದಾಯಿಸಲು ಗ್ರಾಮ ಪಂಚಾಯತ್ ಅವರನ್ನು ಸಂಪರ್ಕಿಸಿದಾಗ ಅವರು ಅವನಿಗೆ ಹೀಗೆ ಹೇಳಿದರು
    A. ಅವನ ಕುಟುಂಬವು REGS ಅಡಿಯಲ್ಲಿ ಅನ್ವಯಿಸುವುದಿಲ್ಲ
    B. ಅವನ ಕುಟುಂಬವು REGS ಗೆ ಅನ್ವಯಿಸುತ್ತದೆ
    C. 50 ದಿನಗಳ ಕಾಲ ಮಾತ್ರ ಅನ್ವಯಿಸುತ್ತದೆ ಏಕೆಂದರೆ ಅವನು ಆರು ತಿಂಗಳ ಕಾಲ ಆ ಪ್ರದೇಶದಲ್ಲಿರಲಿಲ್ಲ
    D. ಕುಟುಂಬದ ಒಬ್ಬ ಸದಸ್ಯರು ಮಾತ್ರ ಅರ್ಜಿ ಸಲ್ಲಿಸಬಹುದು

35. ರಾಮುವಿಗೆ ಮಾರ್ಚ್ 2008ರಲ್ಲಿ ಜಾಬ್ ಕಾರ್ಡ್ ನೀಡಲಾಗಿದ್ದು ಅವನ ಮಗನಿಗೆ ಮೇ 2008ರಲ್ಲಿ 18 ವರ್ಷಗಳಾಯಿತು. ಅವನ ಮಗನು ಉದ್ಯೋಗಕ್ಕೆ ಅರ್ಹನಾಗಲು ರಾಮು ಇದನ್ನು ಮಾಡಬೇಕು
    A. ಗ್ರಾಮ ಪಂಚಾಯತ್ ಗೆ ಕೂಡಲೇ ತಿಳಿಸಬೇಕು
    B. ಗ್ರಾಮ ಪಂಚಾಯತ್ ಅವರು ವಾರ್ಷಿಕ ಅಪ್‌ಡೇಶನ್ ಮಾಡುವವರೆಗೆ ಕಾಯಬೇಕು
    C. ಯೋಜನಾಧಿಕಾರಿ ಅವರನ್ನು ಸಂಪರ್ಕಿಸಬೇಕು
    D. ಅವನು ಯಾವುದನ್ನು ಮಾಡಬೇಕಾಗಿಲ್ಲ. ಏಕೆಂದರೆ ಅವನ ಮಗನಿಗೆ 18 ವರ್ಷವಾದೊಡನೆ ತಾನಾಗಿಯೇ ಸೇರಿಸಲ್ಪಡುತ್ತಾನೆ

36. NREGAಯ ಯೋಜನೆ ಅಡಿಯಲ್ಲಿ ಪಂಚಾಯತಿ ಕ್ಷೇತ್ರದ ಪೂರ್ಣ ಅನುಮತಿಸಲ್ಪಟ್ಟ ಕೆಲಸದಲ್ಲಿ
    A. ಕಡೆಯಪಕ್ಷ ಶೇ 20 ರಷ್ಟು ಖರ್ಚನ್ನು ಗ್ರಾಮ ಪಂಚಾಯತಿ ಅವರು ವಿನಿಯೋಗಿಸುತ್ತಾರೆ
    B. ಕಡೆಯಪಕ್ಷ ಶೇ 50 ರಷ್ಟು ಖರ್ಚನ್ನು ಗ್ರಾಮ ಪಂಚಾಯತಿ ಅವರು ವಿನಿಯೋಗಿಸುತ್ತಾರೆ
    C. ಸಂಪೂರ್ಣವಾಗಿ ಹೊರಗಿನ ಏಜೆನ್ಸಿಗಳು ನೋಡಿಕೊಳ್ಳುತ್ತಾರೆ
    D. ಆ ಕ್ಷೇತ್ರದ NGO ಗಳು ಕಡೆಯಪಕ್ಷ ಶೇ 20 ರಷ್ಟನ್ನು ವಿನಿಯೋಗಿಸುತ್ತಾರೆ

37. ಸಾಮೂಹಿಕ ಶೌಚಾಲಯ ಸಂಕೀರ್ಣಗಳನ್ನು ನಿರ್ಮಿಸುವುದು ಮತ್ತು ಸುಸ್ಥಿತಿಯಲ್ಲಿಡುವುದು ಇವರ ಜವಾಬ್ದಾರಿಯಾಗಿದೆ
    A. ಗ್ರಾಮ ಪಂಚಾಯತ್
    B. ರಾಜ್ಯ ಸರ್ಕಾರ
    C. ಕೇಂದ್ರ ಸರ್ಕಾರ
    D. ಮೇಲಿನ ಎಲ್ಲವೂ

Adda247

38. ಈ ಕೆಳಗಿನವುಗಳಲ್ಲಿ ಯಾವುದು ಸತ್ಯವಲ್ಲ
A. ಪ್ರತಿ ಶಾಲೆಯು ಗಂಡು ಮತ್ತು ಹೆಣ್ಣು ಮಕ್ಕಳಿಗೆ ಬೇರೆ ಬೇರೆ ಶೌಚಾಲಯ ಹೊಂದಿರಬೇಕು
B. ಪ್ರತಿ ಅಂಗನವಾಡಿಯು ಗಂಡು ಮತ್ತು ಹೆಣ್ಣು ಮಕ್ಕಳಿಗೆ ಬೇರೆ ಬೇರೆ ಶೌಚಾಲಯ ಹೊಂದಿರಬೇಕು
C. ಪ್ರತಿ ಶಾಲೆಯು ಆರೋಗ್ಯ ನೈರ್ಮಲ್ಯದಲ್ಲಿ ತರಬೇತಿ ಹೊಂದಿದ ಒಬ್ಬ ಉಪಾಧ್ಯಾಯರನ್ನು ಹೊಂದಿರಬೇಕು
D. ಶಾಲೆಯ ಶೌಚಾಲಯ ನಿರ್ಮಾಣಕ್ಕೆ ಕೇಂದ್ರ ಸರ್ಕಾರ , ರಾಜ್ಯ ಸರ್ಕಾರ ಮತ್ತು ಪೋಷಕರು ಉಪಾಧ್ಯಾಯರು ಹಣ ಒದಗಿಸಬೇಕು

39. ಲಕ್ಷ್ಮೀ ಎಂಬುವರಿಗೆ ಇಂದಿರಾ ಆವಾಜ್ ಯೋಜನೆ ಅಡಿಯಲ್ಲಿ ಗೃಹವನ್ನು ವಿತರಿಸಲಾಗಿತ್ತು. ಅವರು ನಿರ್ಮಾಣ ಕಾರ್ಯದಲ್ಲಿ ನುರಿತ ವ್ಯಕ್ತಿ ಅಲ್ಲದ ಕಾರಣ ಅವರು
A. ರಾಜ್ಯ ಸರ್ಕಾರದಿಂದ ನೇಮಿಸಲ್ಪಟ್ಟ ಗುತ್ತಿಗೆದಾರರನ್ನು ಕಾಣಬೇಕು
B. ನಿರ್ಮಾಣ ಸಂಬಂಧವಾಗಿರುವ ಸರ್ಕಾರದ ಇಲಾಖೆಗಳ ಸಹಾಯ ಪಡೆಯಬೇಕು
C. ಅವರೇ ಸ್ವತ: ಸ್ಥಳೀಯ ಕೆಲಸದವರನ್ನು ಮತ್ತು ಕಟ್ಟಡದ ಮೂಲ ವಸ್ತುಗಳನ್ನು ಸಿದ್ಧಪಡಿಸಿಕೊಳ್ಳಬೇಕು
D. ಮೇಲಿನ ಯಾವುವೂ ಅಲ್ಲ

40. ಕೇಂದ್ರಸರ್ಕಾರವು ಇಂದಿರಾ ಆವಾಜ್ ಯೋಜನೆಗೆ ಸಹಕಾರ, ಸಹಾಯ ನೀಡಲು ಈ ವಿಷಯಗಳನ್ನು ಆಧಾರವಾಗಿಟ್ಟು ಕೊಳ್ಳುತ್ತದೆ
A. ರಾಜ್ಯದ ಗ್ರಾಮೀಣ ಬಡತನ ಮತ್ತು ದೇಶ ಗ್ರಾಮೀಣ ಬಡತನ ಇವುಗಳ ಸರಾಸರಿ ಅನುಪಾತದ ಮೇರೆಗೆ
B. ರಾಜ್ಯದ ಗ್ರಾಮೀಣ ಪ್ರದೇಶ ಮತ್ತು ದೇಶದ ಗ್ರಾಮೀಣ ಪ್ರದೇಶದ ಸರಾಸರಿ ಅನುಪಾತದ ಮೇರೆಗೆ
C. ರಾಜ್ಯದ ಪುರುಷ ಮತ್ತು ಸ್ತ್ರೀಯರ ಸರಾಸರಿಯ ಅನುಪಾತದ ಮೇರೆಗೆ
D. ಮೇಲಿನ ಎಲ್ಲವೂ ಹೌದು

41. ರಾಜೀವ್ ಗಾಂಧಿ ಗ್ರಾಮೀಣ ಗೃಹ ನಿರ್ಮಾಣ ಸಂಸ್ಥೆ, ನಿಯಮಿತ ಸರ್ಕಾರಿ ಸಂಸ್ಥೆಯನ್ನು ಸ್ಥಾಪಿಸಿದವರು
A. ಕೇಂದ್ರ ಸರ್ಕಾರ
B. ಕರ್ನಾಟಕ ಸರ್ಕಾರ
C. ಕೇಂದ್ರ ಮತ್ತು ಇತರ ಎಲ್ಲ ರಾಜ್ಯ ಸರ್ಕಾರದ ಸಹಯೋಗದಿಂದ
D. ಮೇಲಿನ ಯಾವುವೂ ಅಲ್ಲ

42. ನಗರ ಪ್ರದೇಶ ಆಶ್ರಯ ಗೃಹ ನಿರ್ಮಾಣ ಯೋಜನೆಗೆ ಪ್ರಯೋಜನ ಪಡೆಯುವವನು ನೀಡಬೇಕಾದ ಕನಿಷ್ಟ ಹಣ
A. ರೂ 5000 B. ರೂ 10000 C. ನಿರ್ಮಾಣದ ಶೇ10 D. ನಿರ್ದಿಷ್ಟಪಡಿಸಿಲ್ಲ

43. ಅಂಬೇಡ್ಕರ್ ಗೃಹ ನಿರ್ಮಾಣ ಯೋಜನೆಯಡಿಯಲ್ಲಿ ಲಾಭ ಪಡೆಯುವವರು
A. ಸಾಲದ ಮೇಲೆ ಶೇ 11 ರ ಬಡ್ಡಿ ಕಟ್ಟಬೇಕು
B. ಸಾಲದ ಮೇಲೆ ಶೇ 10 ರ ಬಡ್ಡಿ ಕಟ್ಟಬೇಕು
C. ಸಾಲದ ವೆಚ್ಚವನ್ನು 180 ತಿಂಗಳ ಕಂತಿನಲ್ಲಿ ಕಟ್ಟಬೇಕು
D. ಸಾಲ ಪಾವತಿ ಮಾಡಬೇಕಾಗಿಲ್ಲ. ಏಕೆಂದರೆ ಪೂರ್ಣಹಣ ಸಬ್ಸಿಡಿ ಆಗಿ ಬಂದಿರುತ್ತದೆ

44. ನಿಯಮ 73 ರಲ್ಲಿ ಸಂವಿಧಾನದ ತಿದ್ದುಪಡಿ ಮಾಡಿರುವುದು ಈ ಕುರಿತಾಗಿದೆ :
A. ಪಂಚಾಯತಿರಾಜ್ ನಲ್ಲಿ 2–ಟಯರ್ ವಿಧಾನವನ್ನು (system) ಸ್ಥಾಪಿಸುವ ಕುರಿತದ್ದು
B. ಪಂಚಾಯತಿರಾಜ್ ನಲ್ಲಿ 3–ಟಯರ್ ವಿಧಾನವನ್ನು (system) ಸ್ಥಾಪಿಸುವ ಕುರಿತದ್ದು
C. ಜಿಲ್ಲಾ ಯೋಜನಾಸಮಿತಿಯ ಸ್ಥಾಪನೆ ಕುರಿತದ್ದು
D. ಮೇಲಿನ ಎಲ್ಲವೂ ಹೌದು

45. ಕರ್ನಾಟಕ ಪಂಚಾಯತಿರಾಜ್ ಶಾಸನ 1993 ರಲ್ಲಿನ ನಿಬಂಧನೆಗಳು ಜಾರಿಗೆ ಬಂದದ್ದು
A. 1 ನವೆಂಬರ್ 1993 B. 1 ಮೇ 1993 C. 10 ಮೇ 1993 D. 1 ಮೇ 1994



Adda247

46. ಮುನಿಸಿಪಾಲಿಟಿಯ ಮತ್ತು ಪಂಚಾಯತ್‌ಗಳ ಯೋಜನೆಯನ್ನು ಸಂಯೋಜಿಸುವವರು

A. ರಾಜ್ಯ ಸರ್ಕಾರ

B. ಜಿಲ್ಲಾ ಯೋಜನಾ ಸಮಿತಿ

C. ಆರೋಗ್ಯ ಮಂತ್ರಾಲಯ

D. ಮೇಲಿನ ಯಾವುದು ಅಲ್ಲ

47. ಗ್ರಾಮ ಸಭೆಯು ಕನಿಷ್ಟಪಕ್ಷ ಎಷ್ಟುಬಾರಿ ಸಂಧಿಸಬೇಕು

A. ಆರು ತಿಂಗಳು B. ಮೂರು ತಿಂಗಳು C. ಎರಡು ವಾರ D. ನಿರ್ದಿಷ್ಟಪಡಿಸಿಲ್ಲ

48. ಗ್ರಾಮ ಪಂಚಾಯತಿ ಇವುಗಳಿಗೆ ಜವಾಬ್ದಾರಿಯಾಗಿದೆ

A. ಪ್ರತಿ ವರ್ಷ ಶೇ 10 ರಷ್ಟು ಕುಟುಂಬಗಳಿಗೆ ಶೌಚಾಲಯ ಒದಗಿಸುವುದು ಮತ್ತು ಶೀಘ್ರವಾಗಿ ಸಂಪೂರ್ಣವಾಗಿ ಎಲ್ಲರಿಗೂ ನೀಡುವುದು

B. ಪ್ರಾಥಮಿಕ ಶಾಲೆಗೆ ಎಲ್ಲ ಮಕ್ಕಳನ್ನು ನೊಂದಾಯಿಸುವುದು

C. ಸಾರ್ವಜನಿಕ ರಸ್ತೆಗಳನ್ನು ನಿರ್ಮಿಸಿ, ರಿಪೇರಿ ಮತ್ತು ದುರಸ್ತಿ ಮಾಡಿ ಸುಸ್ಥಿತಿಯಲ್ಲಿಡುವುದು

D. ಮೇಲಿನ ಎಲ್ಲ ಕಾರ್ಯಗಳು ಹೌದು

49. ಗ್ರಾಮ ಪಂಚಾಯತಿಯ ಕರ್ತವ್ಯಗಳಲ್ಲಿ ಕುಡಿಯಲು ಮತ್ತು ಸ್ನಾನಕ್ಕೆ ಒದಗಿಸುವ ನೀರನ್ನು ಪ್ರಾಣಿಗಳನ್ನು ತೊಳೆಯಲು ಉಪಯೋಗಿಸಬಾರದು ಮತ್ತು ಕಲ್ಮಶ ಗೊಳಿಸಬಾರದು. ಇಂತಹ ಅಪರಾಧ ಮಾಡಿದಲ್ಲಿ ಅಂತಹವರಿಗೆ ಗ್ರಾಮ ಪಂಚಾಯತಿಯು ಈ ಶಿಕ್ಷೆ ವಿಧಿಸುತ್ತದೆ

A. ಬಂಧನ ಮತ್ತು ಜೈಲು ಶಿಕ್ಷೆ

B. 50 ರೂಗಳ ದಂಡ

C. ಅಪರಾಧಿಯನ್ನು ಆ ಸ್ಥಳದಿಂದ ಹೊರಹಾಕುವುದು

D. ಮೇಲಿನ ಯಾವುವೂ ಅಲ್ಲ

50. ಗ್ರಾಮ ಪಂಚಾಯತ್ ಪ್ರದೇಶದಲ್ಲಿರುವ ಖಾಸಗಿ ಮೋರಿ, ಒಳಚರಂಡಿ ಮತ್ತು ಮನೆಯ ಗಲ್ಲಿಗಳ ದುರಸ್ತಿ ಮತ್ತು ಸುಸ್ಥಿತಿಯಲ್ಲಿಡುವುದು ಇವರ ಜವಾಬ್ದಾರಿ :

A. ಮನೆ ಇರುವ ಜಾಗದ ಮನೆಯ ಒಡೆಯ ಅಥವಾ ಜಮೀನಿನ ಒಡೆಯರದ್ದು

B. ವಾರ್ಡ್ ಪಂಚಾಯತ್ ಅವರದ್ದು

C. ಗ್ರಾಮ ಪಂಚಾಯತ್ ಅವರದ್ದು

D. ಎಲ್ಲರೂ ಹಂಚಿಕೊಂಡು ಮಾಡುವಂತಹುದು

51. ಗ್ರಾಮ ಪಂಚಾಯತಿಯ ಅಸ್ತಿತ್ವದಲ್ಲಿರುವ ಸಮಿತಿ ತಿಂಗಳ ಲೆಕ್ಕಾಚಾರವನ್ನು ಇಟ್ಟು ಸಮಿತಿಗೆ ಒಪ್ಪಿಸುವವರು

A. ಕಾರ್ಯದರ್ಶಿ

B. ಅಧ್ಯಕ್ಷ

C. ಉಪಾಧ್ಯಕ್ಷ

D. ಮೇಲಿನ ಯಾರು ಅಲ್ಲ

52. ಉಪಾಧ್ಯಕ್ಷರ ಕಾರ್ಯಾಲಯದ ಕಾಲಾವಧಿ

A. ಐದು ವರ್ಷ B. ಎರಡು ವರ್ಷ

C. ಅವರು ಗ್ರಾಮಪಂಚಾಯತಿಯ ಸದಸ್ಯರಾಗಿರುವ ತನಕ D. ಅಧ್ಯಕ್ಷರು ನಿರ್ಧರಿಸಿದಂತೆ

53. ಗ್ರಾಮ ಪಂಚಾಯಿತಿ ಸಭೆಗೆ ಕನಿಷ್ಟ ಹಾಜರಾತಿ:

A. ಹತ್ತು B. ಒಟ್ಟು ಸದಸ್ಯರ ಶೇ 10ರಷ್ಟು

C. ಒಟ್ಟು ಸದಸ್ಯರ ಅರ್ಧ ಭಾಗ D. ನಿಶ್ಚಿತವಾಗಿಲ್ಲ

54. ಗ್ರಾಮ ಪಂಚಾಯತಿಯು ಇವುಗಳನ್ನು ಸ್ವೀಕರಿಸಲು ಅಧಿಕಾರ ಹೊಂದಿದೆ
  A. ತೆರಿಗೆ
  B. ಸುಂಕ
  C. ಕರ (ತೆರಿಗೆ)
  D. ಮೇಲಿನ ಎಲ್ಲವೂ

55. ಗ್ರಾಮ ಪಂಚಾಯತಿಯ ಹಣಕಾಸಿನ ಪರಿಸ್ಥಿತಿಯನ್ನು ಹಣಕಾಸಿನ ಮಂಡಲಿ (ಕಮಿಷನ್) ಅವರು ಪರಿಶೀಲನೆ ಮಾಡುತ್ತಾರೆ. ಇದನ್ನು ಆಯ್ಕೆ ಮಾಡುವವರು
  A. ತಾಲ್ಲೂಕು ಪಂಚಾಯತ್ B. ರಾಜ್ಯದ ಮುಖ್ಯಮಂತ್ರಿ
  C. ರಾಜ್ಯಪಾಲರು D. ಇವರಾರೂ ಅಲ್ಲ

56. ಸ್ಥಾಪನಾ ಖರ್ಚುಗಳಿಗೆ ಸರ್ಕಾರವು ಹಣದ ಅನುಮತಿ ಇವರಿಗೆ ನೀಡುತ್ತದೆ
  A. ತಾಲ್ಲೂಕು ಪಂಚಾಯತ್
  B. ಗ್ರಾಮ ಪಂಚಾಯತ್
  C. ಜಿಲ್ಲಾ ಪಂಚಾಯತ್
  D. ಮೇಲಿನ ಎಲ್ಲರಿಗೂ ಹೌದು

57. ಗ್ರಾಮ ಪಂಚಾಯತಿಯ ಸ್ಟ್ಯಾಂಡಿಂಗ್ ಕಮಿಟಿಗಳನ್ನು ಇವುಗಳಿಗಾಗಿ ಸ್ಥಾಪಿಸುತ್ತದೆ
  A. ವ್ಯವಸಾಯ ಉತ್ಪಾದನೆ
  B. ವಿದ್ಯಾಭ್ಯಾಸ ಮತ್ತು ಸಾರ್ವಜನಿಕ ಆರೋಗ್ಯ
  C. ಮಹಿಳಾ ಮತ್ತು ಮಕ್ಕಳ ಕಲ್ಯಾಣ
  D. ಈ ಮೇಲಿನ ಎಲ್ಲವೂ ಹೌದು

58. ಉಪಾಧ್ಯಕ್ಷರು ಅಧ್ಯಕ್ಷರ ಕರ್ತವ್ಯಗಳನ್ನು ಈ ಸಮಯದಲ್ಲಿ ಮಾಡುತ್ತಾರೆ
  A. ಅಧ್ಯಕ್ಷರು ಬಾರದಿದ್ದಾಗ ಅಥವಾ ರಜೆ ತೆಗೆದುಕೊಂಡಾಗ
  B. ಅಧ್ಯಕ್ಷರ ಜೊತೆ ಜೊತೆಗೆ
  C. ಗ್ರಾಮ ಪಂಚಾಯತಿಯ ವಿಶೇಷ ಸಭೆ ನಡೆಸುವಾಗ
  D. ಈ ಮೇಲಿನ ಎಲ್ಲವೂ

59. ಅಬ್ದುಲ್ ನಸೀರ್ ಸಾಬ್ ಸ್ಟೇಟ್ ಇನ್‌ಸ್ಟಿಟ್ಯೂಟ್ ಆಫ್ ರೂರಲ್ ಡೆವಲಪ್‌ಮೆಂಟ್ ಇಲ್ಲಿದೆ
  A. ಮೈಸೂರು B. ಬೆಂಗಳೂರು C. ಗುಲ್ಬರ್ಗಾ D. ಹಾಸನ

60. ಪಂಚಾಯತ್ ಹಣಕಾಸು ಅಭಿವೃದ್ಧಿ ಹಾಗೂ ಚಟುವಟಿಕೆಗಳ ಹನ್ನೊಂದನೆಯ ಹಣಕಾಸು ಆಯೋಗದ ಶಿಫಾರಸ್ಸಿನ ಕಾಲಾವಧಿ
  A. 1993-1994 ರಿಂದ 1998-1999
  B. 2000-2001 ರಿಂದ 2004-2005
  C. 2003-2004 ರಿಂದ 2008-2009
  D. ಮೇಲಿನ ಎಲ್ಲವೂ ಹೌದು

## GENERAL ENGLISH

61. Novels adapted for the stage have never really been my cup of tea. The idiom means
  A. Not to one's taste B. Something which is mediocre
  C. To be odd in taste D. Never a treat

62. "Patience and perseverance lead to achievement." means
  A. There are two sides to every question B. Slow and steady wins the race
  C. Practice makes perfect D. There's no time like the present

63. My neighbour along with her two dogs, ____________ across the pasture daily.
  A. walks B. walking C. walk D. is walking

64. Pick out the odd word.
A. Preserve B. Conserve C. Engage D. Protect

65. Kiran is _________ intelligent boy. He got _________ best student Award. The appropriate words to be filled in the blanks are
A. the, an B. a, the C. an, the D. an, a

66. The noise frightened the horse. This can also be written as
A. The horse had been frightened by the noise
B. The horse has been frightened by the noise
C. The horse was being frightened by the noise
D. The horse was frightened by the noise

67. "To give someone a piece of your mind" means
A. To clear your mind of doubts
B. To give a sound scolding
C. To calm your temper
D. To break the ice

68. The synonym of 'Ameliorate' is
A. Decay B. Improve C. Die D. Success

69. The opposite of "Ephemeral" is
A. Spiritual B. Ethical C. Permanent D. Stable

70. Choose the correctly spelt word
A. Homogenus B. Homogenius C. Homagenous D. Homogeneous

71. ————— of impending danger, he will not anticipate it
A. If you have warned him
B. Unless you warn him
C. Until you have warned him
D. Unless you warned him

72. The negative prefix for the word "glorious" is
A. Un B. Dis C. In D. Im

73. Which one of the given pair of words is similar to the following?
Apathy: indifference
A. In total : partially B. Pleasure : torture C. Sound : light D. Bonafide : genuine

74. "Reverently" means
A. To annoy deeply B. To love deeply C. To irritate deeply D. To respect deeply

75. Choose the correctly spelt word
A. Perseverence B. Perceveerence C. Perseverance D. Perceiverance

76. There are four flyovers coming up in our area, with three soon to open and more in the Pipeline. The underlined words mean
A. On the way
B. Following each other
C. Far away from each other
D. Ready for inauguration

77. The tenacity demonstrated by the youngster was appreciated by all. The underlined word means
A. Courage B. Intelligence C. Determination D. Audacity

78. Pick the odd word out
A. Humble B. Greedy C. Meek D. Unassuming

79. The scissors ——— on the desk
A. Was B. Are C. Is D. Has been

Adda247

80. Which of the following is arranged in alphabetical order

A. Arun, Aishwarya, Arya, Amartya
B. Amartya, Aishwarya, Arun, Arya
C. Aishwarya, Amartya, Arun, Arya
D. Arya, Amartya, Aishwarya, Arun

81. Find the pair that is similar to Goose: Gander

A. Ox : Oxen
B. Mouse : Rat
C. Peahen : Peacock
D. Moose : Snake

82. Peter Piper picked a peck of pickled peppers and where is the peck of pickled peppers Peter Piper picked. How many P's are there in the sentence?

A. Seventeen
B. Sixteen
C. Nineteen
D. None of these

83. Income Tax is generally <u>associated for one's</u> annual income. Identify the grammatically correct phrase for the underlined words

A. Dependent on one's
B. Associated with once
C. Related to one's
D. No correction required

84. Vinod had all along been kind to Jagan; so he __________ by being loyal to him

A. Reprimanded
B. Remanded
C. Reciprocated
D. Retaliated

85. "What makes life interesting is constant variation and change" means

A. Live and let live
B. The unexpected always happens
C. Variety is the spice of life
D. There is many a good tune played on the old fiddle

**Answer questions 86 and 87 based on the following passage.**

One essential factor is usually overlooked in the national plans for development. The forgotten factor is the role of women. Development will be handicapped as long as women remain second class citizens, uneducated, without any voice in family or community decisions, without legal or economic status, married when they are practically children and many of them die before they are of school age. We can enhance development by improving "woman power", by giving women opportunity to develop themselves.

86. The author appears to be a

A. Psychologist
B. Doctor
C. Accountant
D. Economist

87. After reading the paragraph, which one of these are problems?

A. Lack of literacy among women
B. Lack of economic independence
C. Poor mortality rates
D. All of these

**Answer questions 88-90 based on the following passage:**

"Long years ago, we made a tryst with destiny, and now the time comes when we shall redeem our pledge, not wholly or in full measure, but very substantially. At the stroke of the midnight hour, when the world sleeps, India will awake to life and freedom. A moment comes, which comes but rarely in history, when we step out from the old to the new, when an age ends, and when the soul of a nation, long suppressed, finds utterance. It is fitting that at this solemn moment we take the pledge of dedication to the service of India and her people and to the still larger cause of humanity. The ambition of the greatest man of our generation has been to wipe every tear from every eye."

88. Which event does the paragraph refer to?

A. January 26, 1950
B. October 02, 1869
C. August 15, 1947
D. None of these

89. "made a tryst with destiny" means

A. To come to terms with destiny
B. To turn the tables on destiny
C. An appointment with destiny
D. To change the destiny

90. Who is the author referring to as the greatest man of our generation?

A. Jawaharlal Nehru
B. Mahatma Gandhi
C. Sardar Vallabhai Patel
D. Lokamanya Tilak

# ಸಾಮಾನ್ಯ ಕನ್ನಡ ಪತ್ರಿಕೆ

91. 'ದಾರಿಹೋಕ' – ಈ ಪದದ ಸಮಾನಾರ್ಥ ಪದ ಇದು
    A. ದಾರಿಯಲ್ಲಿ ಹೋಗುತ್ತಿರುವವನು B. ಪ್ರವಾಸಿ
    C. ದಾರಿಯಲ್ಲಿ ನಿಂತವನು D. ದಾರಿಗೆ ಅಡ್ಡ ಬಂದವನು

92. 'ಜುಲ್ಮಾನೆ' – ಇದರ ವ್ಯಾಕರಣ ವಿಶೇಷಣ ಇದು
    A. ನುಡಿಗಟ್ಟು B. ದಂಡ C. ಅನ್ಯದೇಶ್ಯ ಪದ D. ದ್ವಿರುಕ್ತಿ

93. 'ಬುವಿ' – ಪದದ ತದ್ಭವ ಪದ ಇದು
    A. ಭವಿ B. ಛವಿ C. ಭೂಮಿ D. ಬಾವಿ

94. 'ಅಗತ್ಯ' – ಈ ಪದದ ವಿರುದ್ಧ ಪದ ಇದು
    A. ನಿರಗತ್ಯ B. ಅಗತ್ಯ C. ಅನಗತ್ಯ D. ಸನಗತ್ಯ

95. 'ಎರವಲು' – ಈ ಪದದ ಸಮಾನಾರ್ಥಕ ಪದ ಇದು
    A. ಅವಲಕ್ಕಿ B. ಅದಲು ಬದಲು C. ಅವಳಿ ಜವಳಿ D. ಸಾಲ

96. 'ನೀರು ನಿಡಿ' – ಇದಕ್ಕೆ ವ್ಯಾಕರಣದಲ್ಲಿ ಈ ಹೆಸರಿದೆ
    A. ದ್ವಿರುಕ್ತಿ B. ಅನುಕರಣ ಅವ್ಯಯ
    C. ಜೋಡಿಪದ D. ಭಾವಸೂಚಕ ಅವ್ಯಯ

97. 'ಕೈ ಕೊಡು' – ಈ ನುಡಿಗಟ್ಟಿನ ಅರ್ಥ ಇದು
    A. ಕೈ ಕುಲುಕು B. ಕೈ ಜೋಡಿಸು C. ಮೋಸಮಾಡು D. ಕೈ ಸೇರಿಸು

98. 'ಮಾತು ಬಲ್ಲವನಿಗೆ ಜಗಳವಿಲ್ಲ' – ಈ ಗಾದೆಯ ಅರ್ಥವಿದು
    A. ಮಾತಿದ್ದರೆ ಜಗಳ B. ಮಾತು ತಿಳಿದರೆ ಜಗಳ ಆಡಬಹುದು
    C. ಮಾತಿನಲ್ಲಿ ತೂಕವಿರಲಿ D. ಜಗಳ ಬೇಕಿದ್ದರೆ ಮಾತು ಬೇಕು

99. 'ಸಸ್ಯಹಾರ' – ಇದರ ಶುದ್ಧ ರೂಪ ಇದು
    A. ಸಸ್ಯಾಹಾರ B. ಸಸ್ಯಾಹರ C. ಸಾಸ್ಯಾಹಾರ D. ಸಸ್ಯಹರ

100. 'ಕುರುಹು' – ಈ ಪದದ ಸಮಾನಾರ್ಥಕ ಪದ ಇದು
    A. ಕುರು B. ಕರು C. ಗುರುತು D. ಗರಿಕೆ

101. 'ಬಂಡೆಗಲ್ಲು' – ಇದನ್ನು ಹೀಗೆ ಬಿಡಿಸಿ ಬರೆಯಬೇಕು
    A. ಬಂಡೆ + ಗಲ್ಲು B. ಬಂಡೆಗ + ಅಲ್ಲು
    C. ಬಂ + ಡೆಗಲ್ಲು D. ಬಂಡೆ + ಕಲ್ಲು

102. ವರ್ಣಮಾಲೆಯಲ್ಲಿ ಅಂ ಅಕ್ಷರಕ್ಕೆ ಈ ಹೆಸರಿದೆ
    A. ದೀರ್ಘಸ್ವರ B. ಹ್ರಸ್ವಸ್ವರ C. ಉಚ್ಚಸ್ವರ D. ಅನುಸ್ವರ

103. 'ನಿಚ್ಚಣಿಕೆ' ಪದದ ಅರ್ಥವಿದು
    A. ಏಣಿ B. ಬಾಚಣಿಕೆ C. ದೋಣಿ D. ಮುಚ್ಚಳಿಕೆ

104. ಪತ್ರ ಬರೆಯುವಾಗ ಪ್ರತಿ ಪತ್ರದ ಬಲ ಮೇಲ್ತುದಿಯಲ್ಲಿ ಇದನ್ನು ಬರೆಯಲೇಬೇಕು

A. ವಿಳಾಸ
B. ದಿನಾಂಕ, ಸ್ಥಳ
C. ಸಂಬೋಧನಾ ಒಕ್ಕಣೆ
D. ಮುಕ್ತಾಯದ ಸಹಿ

105. ಕಚೇರಿಯ ಅಧಿಕಾರಿಗಳನ್ನು ಪತ್ರದಲ್ಲಿ ಈ ಒಕ್ಕಣೆಯಿಂದ ಸಂಬೋಧಿಸಬೇಕು

A. ತೀರ್ಥರೂಪರಿಗೆ
B. ಮಾತೃಶ್ರೀಯವರೇ
C. ಮಾನ್ಯರೇ
D. ಪೂಜ್ಯರೇ

106. 'ಹೊತ್ತಾರೆ' ಎಂಬ ಗ್ರಾಮ್ಯ ಪದಕ್ಕೆ ಈ ಅರ್ಥವಿದೆ

A. ಹೊರುವುದು
B. ಬೆಳಗಿನ ಸಮಯ
C. ಹೊರೆ
D. ಭಾರವಾದುದು

107. ಇದು ಭವಿಷ್ಯತ್ ಕಾಲದ ವಾಕ್ಯ

A. ಮಕ್ಕಳು ಶಾಲೆಗೆ ಹೋಗುವರು
B. ಮಕ್ಕಳು ಶಾಲೆಗೆ ಹೋದರು
C. ಮಕ್ಕಳು ಶಾಲೆಗೆ ಹೋಗುವವರು
D. ಮಕ್ಕಳು ಶಾಲೆಗೆ ಹೋಗರು

108. ಙ ಞ ಣ ನ ಮ ಅಕ್ಷರಗಳಿಗೆ ಈ ಹೆಸರಿದೆ

A. ಅಲ್ಪ ಪ್ರಾಣಗಳು
B. ಅನುನಾಸಿಕಗಳು
C. ಮಹಾಪ್ರಾಣಗಳು
D. ಸಂಧ್ಯಕ್ಷರಗಳು

109. ವರ್ಗೀಯ ವ್ಯಂಜನಗಳಲ್ಲಿನ ಒಟ್ಟು ಅಕ್ಷರಗಳು ಇಷ್ಟು

A. 49
B. 15
C. 25
D. 10

**ಈ ಗದ್ಯ ಭಾಗವನ್ನು ಓದಿಕೊಳ್ಳಿ. ಕೆಳಗಿನ ಪ್ರಶ್ನೆಗಳಿಗೆ ಸೂಕ್ತವಾಗಿ ಉತ್ತರಿಸಿ.**

ದೇಹ, ಮನಸ್ಸು ಸರಿಯಾಗಿರುವ ನಾವು ನಮಗೆ ಕೊಡಮಾಡಿದ ಅವಕಾಶಗಳನ್ನು ಸರಿಯಾಗಿ ಉಪಯೋಗಿಸಿಕೊಂಡು ನಮ್ಮ ಶಕ್ತಿಯನ್ನು ಸರ್ವತೋಮುಖವಾಗಿ ಹೆಚ್ಚಿಸಿಕೊಳ್ಳಬೇಕಲ್ಲವೇ? ದೈಹಿಕ, ಮಾನಸಿಕ, ಬೌಧಿಕ ಹಾಗೂ ನೈತಿಕ ಬಲಗಳ ಜೊತೆಗೆ ನಾವು ನಮ್ಮ ಆತ್ಮ ಶಕ್ತಿಯನ್ನು ಬೆಳೆಸಿಕೊಳ್ಳಬೇಕು. 'ಶಕ್ತಿಯೇ ಜೀವನ, ದುರ್ಬಲತೆಯೇ ಮರಣ, ಇದೊಂದು ದೊಡ್ಡ ಸತ್ಯ. 'ಶಕ್ತಿ ಸೌಭಾಗ್ಯ, ಚಿರಜೀವನದ ಒಳಗುಟ್ಟು. ದುರ್ಬಲತೆ, ಚಿಂತೆ ದು:ಖಗಳ ಮೂಲ' ಎಂದ ಸ್ವಾಮಿ ವಿವೇಕಾನಂದರು, 'ಬಲಿಷ್ಠರಾಗಿ, ಕಬ್ಬಿಣದ ಮಾಂಸ ಖಂಡ, ಉಕ್ಕಿನ ನರಮಂಡಲ, ವಿದ್ಯುತ್ತಿನ ಇಚ್ಛಾಶಕ್ತಿಯ ಬಲ ಇವುಗಳನ್ನು ಬೆಳೆಸಿಕೊಂಡು ನಿಮ್ಮ ಕಾಲ ಮೇಲೆ ನಿಲ್ಲಿ, ಎಂದು ತಿರುಗಿ ಸಾರಿದರು. ದುರ್ಬಲ, ತಾನು ನಾಶವಾಗುವುದಲ್ಲದೆ ಇತರರಲ್ಲಿ ಶೋಷಣೆ ಮತ್ತು ಹಿಂಸೆಯ ಪ್ರವೃತ್ತಿಯನ್ನು ಹುಟ್ಟಿಸುತ್ತಾನೆ. ನಮ್ಮ ಪರಂಪರೆ ನೀಡುವ ಮುಖ್ಯ ಬೋಧನೆಯೇ ಶಕ್ತಿಯನ್ನು ಬೆಳೆಸಿಕೊಳ್ಳಿ ಎಂಬುದು. ನಿರ್ವೀರ್ಯನಾಗಬೇಡ ಎಂದು ಶ್ರೀಕೃಷ್ಣ ಅರ್ಜುನನಿಗೆ ಬೋಧಿಸಿದ.

110. 'ಬಲಿಷ್ಠರಾಗಿ, ಕಬ್ಬಿಣದ ಮಾಂಸಖಂಡ, ಉಕ್ಕಿನ ನರಮಂಡಲ, ವಿದ್ಯುತ್ತಿನ ಇಚ್ಛಾಶಕ್ತಿಯ ಬಲ ಇವುಗಳನ್ನು ಬೆಳಿಸಿಕೊಳ್ಳಿ' ಎಂದವರು ಇವರು

A. ಅರ್ಜುನ
B. ಶ್ರೀಕೃಷ್ಣ
C. ಪುರಂದರದಾಸರು
D. ವಿವೇಕಾನಂದರು

111. 'ನಿರ್ವೀರ್ಯನಾಗಬೇಡ' ಎಂದು ಬೋಧಿಸಿದ್ದು ಈತನಿಗೆ

A. ಶ್ರೀಕೃಷ್ಣ
B. ಅರ್ಜುನ
C. ಸ್ವಾಮಿ ವಿವೇಕಾನಂದ
D. ವಾಲ್ಮೀಕಿ

112. 'ಇದು ಜೀವನ, ಇದು ಮರಣ'

A. ಶಕ್ತಿಯೇ, ದುರ್ಬಲತೆಯೇ
B. ದೈಹಿಕವೇ, ಮಾನಸಿಕವೇ
C. ಕಬ್ಬಿಣದ ಮಾಂಸಖಂಡ, ಉಕ್ಕಿನ ನರಮಂಡಲ
D. ಹಿಂಸೆಯೇ, ಅಹಿಂಸೆಯೇ

113. ಚಿರಜೀವನದ ಒಳಗುಟ್ಟು ಇದು

A. ದುರ್ಬಲತೆ, ಚಿಂತೆ
B. ಶಕ್ತಿ ಸೌಭಾಗ್ಯ
C. ನಿರ್ವೀರ್ಯತನ
D. ಚಿಂತೆದು:ಖಗಳು

**ಈ ಗದ್ಯ ಭಾಗವನ್ನು ಓದಿಕೊಳ್ಳಿ. ಕೆಳಗಿನ ಪ್ರಶ್ನೆಗಳಿಗೆ ಸೂಕ್ತವಾಗಿ ಉತ್ತರಿಸಿ.**

ಅಂದು ಮಹಾರಾಜ ಕಾಲೇಜು ಸಂಸ್ಕೃತಿ ಮತ್ತು ಜ್ಞಾನದ ದೇಗುಲದಂತಿತ್ತು. ಇಂದಿನಂತೆ ವಿದ್ಯಾರ್ಥಿ ಮತ್ತು ಉಪಾಧ್ಯಾಯರ ಚಳವಳಿ ಇರಲಿಲ್ಲ. ಕಾಲೇಜಿನ ಶಿಕ್ಷಕ ವರ್ಗದವರು ಅಲ್ಪ ಸಂಬಳ ಬರುತ್ತಿದ್ದರೂ ತಮ್ಮ ವೃತ್ತಿ ಪವಿತ್ರವಾದುದೆಂಬ ತೃಪ್ತಿಯಿಂದ ಕಾರ್ಯ ನಿರ್ವಹಿಸುತ್ತಿದ್ದರು. ಅವರಲ್ಲಿ ಜ್ಞಾನ ಸಂಪತ್ತಿನ ಜೊತೆಗೆ ನೈತಿಕ ಸಂಪತ್ತು ಇತ್ತು. ಮಹಾರಾಜಾ ಕಾಲೇಜಿನಲ್ಲಿಯೂ ನನಗೆ ವಿದ್ಯಾರ್ಥಿವೇತನ ಲಭ್ಯವಾಗಿತ್ತು. ವಿದ್ಯಾರ್ಥಿ ವೇತನದ ಮೊತ್ತ ತಿಂಗಳಿಗೆ ಹದಿನೆಂಟು ರೂಪಾಯಿ. ವಿದ್ಯಾರ್ಥಿವೇತನ ಪಡೆಯುತ್ತಿದ್ದವರಿಗೆ ಕಾಲೇಜಿನ ಶುಲ್ಕವಿರಲಿಲ್ಲ. ಬೆಂಗಳೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಹಣಕ್ಕಾಗಿ ನಮ್ಮ ಚಿಕ್ಕಪ್ಪನನ್ನು ಆಶ್ರಯಿಸುತ್ತಿರಲಿಲ್ಲ. ಅವರಿಗೆ ನನ್ನಿಂದ ತೊಂದರೆಯಾಗಬಾರದೆಂಬ ಉದ್ದೇಶದಿಂದ ವಿದ್ಯಾರ್ಥಿವೇತನದಿಂದಲೇ ನನ್ನ ಜೀವನ ನಿರ್ವಹಿಸುತ್ತಿದ್ದೆ.

114. ಅಂದಿನ ಶಿಕ್ಷಕರಲ್ಲಿ ಜ್ಞಾನ ಸಂಪತ್ತಿನ ಜೊತೆಗೆ ಈ ಸಂಪತ್ತೂ ಇತ್ತು

A. ಖನಿಜ ಸಂಪತ್ತು  B. ನೈತಿಕ ಸಂಪತ್ತು  C. ಐಶ್ವರ್ಯ ಸಂಪತ್ತು  D. ಆರೋಗ್ಯ ಸಂಪತ್ತು

115. ಅಂದಿನ ಮಹಾರಾಜಾ ಕಾಲೇಜು ಹೀಗಿತ್ತು

A. ಸಂಸ್ಕೃತಿ ಮತ್ತು ಜ್ಞಾನದ ದೇಗುಲ  B. ದೊಡ್ಡ ಕಟ್ಟಡ

C. ತರಗತಿಯ ತುಂಬ ಹುಡುಗರಿದ್ದ ಕೋಣೆ  D. ನೆಮ್ಮದಿ, ತೃಪ್ತಿಯ ಜಾಗ

**ಈ ಗದ್ಯ ಭಾಗವನ್ನು ಓದಿಕೊಳ್ಳಿ. ಕೆಳಗಿನ ಪ್ರಶ್ನೆಗಳಿಗೆ ಸೂಕ್ತವಾಗಿ ಉತ್ತರಿಸಿ.**

ದೈನ್ಯದ ಬುಡದಲ್ಲಿ ಭಯವಿದೆ. ಭಯವೇ ನರನನ್ನು ದೀನನನ್ನಾಗಿ ಮಾಡುತ್ತದೆ. ಭಯವೆಂದರೆ ದಟ್ಟಡವಿಯಲ್ಲಿ ದಾರಿ ತಪ್ಪಿದ ಗೋವು, ಮುಚ್ಚಿದ ಕಣ್ಣುಗಳು, ಹಾರುತ್ತಿರುವ ಎದೆ, ಕತ್ತಲೆಯಲ್ಲಿ ಕಂಗೆಟ್ಟ ಶಿಶು, ಚಕ್ರವರ್ತಿಯ ಎದುರಿಗೆ ನ್ಯಾಯಾಸ್ಥಾನದಲ್ಲಿ ನಡುಗುತ್ತ ನಿಂತ ಅಪರಾಧಿ. ಬೇಟೆ ನಾಯಿ ಬೆನ್ನಟ್ಟಿದ ಮೊಲದ ಭಯ. ಭಯ ಹುಟ್ಟುವುದು ಅಜ್ಞಾನದಿಂದ, ಪಾಪ ಶಂಕೆಯಿಂದ, ದೂಷಿತ ಹೃದಯದಿಂದ, ಜ್ಞಾನ ಹೆಚ್ಚಿದಂತೆ ಭಯವು ಕಡಿಮೆಯಾಗುವುದು. ಹಳ್ಳಿಗ ವಿಮಾನದಲ್ಲಿ ಕೂಡಲೂ ಅಂಜುತ್ತಾನೆ. ಆದರೆ ಹಲವು ತಿಂಗಳು ತರಬೇತಿ ಪಡೆದ ನಂತರ ಅವನೇ ವಿಮಾನ ನಡೆಸಬಹುದು.

116. ಭಯವು ಕಡಿಮೆಯಾಗುವುದು ಇದು ಹೆಚ್ಚಿದಾಗ

A. ಜ್ಞಾನ  B. ಪೋಲೀಸ್  C. ಕತ್ತಲೆಯಲ್ಲಿದ್ದಾಗ  D. ಅಂಜಿಕೆ ಇಲ್ಲದಿದ್ದಾಗ

117. ಭಯದಿಂದ ನರನು ಹೀಗಾಗುತ್ತಾನೆ

A. ಬಡವ  B. ಅನಾಮಿಕ  C. ದೀನ  D. ಹಳ್ಳಿಗ

**ಈ ಗದ್ಯ ಭಾಗವನ್ನು ಓದಿಕೊಳ್ಳಿ. ಕೆಳಗಿನ ಪ್ರಶ್ನೆಗಳಿಗೆ ಸೂಕ್ತವಾಗಿ ಉತ್ತರಿಸಿ.**

ಜಗತ್ತು ಪೂಜಿಸುವುದು ಶಕ್ತಿಯನ್ನು; ದುರ್ಬಲತೆಯನ್ನಲ್ಲ ಎಂಬುದನ್ನು ಯುವಕರು ಸರಿಯಾಗಿ ತಿಳಿದಿರಬೇಕು. ಕ್ರಿಕೆಟ್ ಮೈದಾನದಲ್ಲಿ ದಾಂಡಿಗ ನಾಲ್ಕು ಸಿಕ್ಸರ್ ಬಾರಿಸಿದರೆ ಸಹಸ್ರಾರು ಯುವಕರು ಚಪ್ಪಾಳೆ ತಟ್ಟಿ, ಹುಚ್ಚೆದ್ದು ಕುಣಿದು, ಅವನನ್ನು ಹೆಗಲ ಮೇಲೇರಿಸಿಕೊಂಡು ರಥೋತ್ಸವ ಮಾಡುವುದಿಲ್ಲವೇ? ಅದು ಅವನ ಶಕ್ತಿ ಸಾಮರ್ಥ್ಯ ದಕ್ಷತೆಗಳಿಗೆ ಸಲ್ಲಿಸಿದ ಗೌರವವಲ್ಲವೇ? ಶಕ್ತಿಯನ್ನು ಎಲ್ಲರೂ ಭಕ್ತಿ ಗೌರವಗಳಿಂದ ನೋಡುತ್ತಾರೆ. ಶಕ್ತನಾದರೆ ನೆಂಟರೆಲ್ಲ ಹಿತರು, ಅಶಕ್ತನಾದರೆ ಆಪ್ತ ಜನರೇ ವೈರಿಗಳು ಎಂದು ಪುರಂದರದಾಸರು ಹೇಳಿದ ಮಾತು ಎಷ್ಟು ಸತ್ಯ! ತಂದೆ ತಾಯಂದಿರು ಪ್ರೀತಿಯಿಂದ ಸಾಕಿ ಸಲಹಿದ ಮಗು ಬೆಳೆದು ದುರ್ಬಲನೂ, ರೋಗಿಷ್ಟನೂ, ದಡ್ಡನೂ, ಮೂರ್ಖನೂ ಆದರೆ ಏನೆನ್ನುವರು ಬಲ್ಲಿರಾ? ಯಾಕಾಗಿ ಹುಟ್ಟಿದನಿವನು, ಕುಲಕ್ಕೆ ಕಳಂಕ ಎನ್ನುವರಲ್ಲವೇ ಹೌದು, ಶಕ್ತನಾದರೆ ಎಲ್ಲರೂ ಆಪ್ತರು, ಅಶಕ್ತನನ್ನು ಎಲ್ಲರೂ ತಿರಸ್ಕರಿಸುವರು.

118. ಯುವಕರು ಸರಿಯಾಗಿ ತಿಳಿದಿರಬೇಕಾದದ್ದು ಇದನ್ನು

A. ಜಗತ್ತು ಪೂಜಿಸುವುದು ಶಕ್ತಿಯನ್ನು; ದುರ್ಬಲತೆಯನ್ನಲ್ಲ

B. ಚಪ್ಪಾಳೆ ತಟ್ಟಿ, ಹುಚ್ಚೆದ್ದು ಕುಣಿಯುವುದನ್ನು

C. ಶಕ್ತಿಸಾಮರ್ಥ್ಯ ದಕ್ಷತೆಗಳನ್ನು ಸಲ್ಲಿಸುವುದು

D. ನಾಲ್ಕು ಸಿಕ್ಸರ್ ಬಾರಿಸುವುದನ್ನು

119. 'ಅಶಕ್ತ' ಎಂದರೆ

A. ಆಷಾಢದಲ್ಲಿ ಹುಟ್ಟಿದವನು  B. ಶಕ್ತ ಸಂಪ್ರದಾಯದವನು

C. ಬುದ್ಧನ ದಾರಿಯಲ್ಲಿರುವವನು  D. ಶಕ್ತಿ ಇಲ್ಲದವನು

120. ಶಕ್ತನಾದರೆ ಎಲ್ಲರೂ ಆಪ್ತರು, ಅಶಕ್ತನನ್ನು ಎಲ್ಲರೂ

A. ಕೊಂಡಾಡುವರು  B. ಮೆರವಣಿಗೆ ಮಾಡುವರು

C. ತಿರಸ್ಕಾರ ಮಾಡುವರು  D. ಗೌರವಿಸುವರು

## ಗಣಕ ಸಾಕ್ಷರತಾ ಪರೀಕ್ಷೆ

121. ಒಂದು ಮೆಗಾಬೈಟ್‌ಗೆ ಸಮನಾದುದು

A. 210 ಬೈಟ್‌ಗಳು
B. 1000 ಬೈಟ್‌ಗಳು
C. 1024 ಬೈಟ್‌ಗಳು
D. ಇವು ಯಾವುದೂ ಅಲ್ಲ

122. ಸೂಕ್ಷ್ಮ ಕ್ರಿಯಾತ್ಮಕ (ಮೈಕ್ರೊಪ್ರೋಸೆಸರ್) ಅಂದರೆ

A. ಋಣ ವಿದ್ಯುನ್ಮಾನದ ಚೂರು
B. ಗಣಿತದ ಕೋಷ್ಟಕಗಳನ್ನು ಬಿಡಿಸುವಂತಹುದು
C. ತರ್ಕಬದ್ಧ ಕ್ರಿಯೆಯನ್ನು ಮಾಡುವಂತಹುದು
D. ಮೇಲೆ ಹೇಳಿದ ಎಲ್ಲವೂ ಸರಿ

123. ನಿಮ್ಮಗಣಕದ ಮೇಲೆ ಅಂತರ್ಜಾಲದ ಹಾದಿಯನ್ನು ತಲುಪಲು, ನಿಮಗೆ ಇದರ ಅವಶ್ಯಕತೆ ಉಂಟು

A. ಸಂಕೇತಗಳನ್ನು ಪರಿವರ್ತಿಸಲು ಅಂತರ್ಜಾಲದಲ್ಲಿರುವ ಸಾಧನೆ(modem), ಅಂತರ್ಜಾಲ ಮತ್ತು ಮಾಹಿತಿ ಹುಡುಕುವ ಪ್ರಕ್ರಿಯೆ (browser)
B. ಸಂಕೇತಗಳನ್ನು ಪರಿವರ್ತಿಸಲು ಅಂತರ್ಜಾಲದಲ್ಲಿರುವ ಸಾಧನೆ(modem), ಅಂತರ್ಜಾಲ, ಮಾಹಿತಿ ಹುಡುಕುವ ಪ್ರಕ್ರಿಯೆ (browser) ಮತ್ತು ಶೋಧಕ ಯಂತ್ರ (search engine)
C. ಸಂಕೇತಗಳನ್ನು ಪರಿವರ್ತಿಸಲು ಅಂತರ್ಜಾಲದಲ್ಲಿರುವ ಸಾಧನೆ(modem), ಅಂತರ್ಜಾಲ, ಮಾಹಿತಿ ಹುಡುಕುವ ಪ್ರಕ್ರಿಯೆ (browser) ಮತ್ತು ಮುದ್ರಕ
D. ಸಂಕೇತಗಳನ್ನು ಪರಿರ್ಮತಿಸಲು ಅಂತರ್ಜಾಲದಲ್ಲಿರುವ ಸಾಧನೆ(modem), ಅಂತರ್ಜಾಲ ಮತ್ತು ಈಮೇಲ್ ಪ್ಯಾಕೇಜ್

124. ಲೈನಕ್ಸ್ (Linux), ಯುನಿಕ್ಸ್ (Unix), ವಿಂಡೋಸ್‌ವಿಸ್ತಾ ಮತ್ತು ಮಾಕಿಂತೋಷ್(Macintosh) ಇವುಗಳು ಇದಕ್ಕೆ ಉದಾಹರಣೆಯಾಗಿವೆ

A. ವೆಬ್ ಸೈಟ್‌ನಲ್ಲಿ ಮಾಹಿತಿ ಹುಡುಕುವ ಪ್ರಕ್ರಿಯೆ (Browsers)
B. ಸಂಕಲನಕ (Compilers)
C. ಕಾರ್ಯಾಚರಣೆ ವ್ಯವಸ್ಥೆ (Operating system)
D. ಯುಟಿಲಿಟೀಸ್(Utilities)

125. ಆಗಾಗ ನೋಡುವ ವೆಬ್‌ಸೈಟ್ ವಿಳಾಸಗಳನ್ನು ಸಂಗ್ರಹಿಸಲು ಈ ಕೆಳಗಿನದರಲ್ಲಿ ಯಾವುದನ್ನು ಉಪಯೋಗಿಸಲಾಗುತ್ತದೆ

A. ಸೇವ್
B. ಆರ್ಗನೈಝರ್
C. ಬುಕ್‌ಮಾರ್ಕ್ಸ್
D. ರಿಕಾಲ್

126. ಸ್ಥಳೀಯ ಕ್ಷೇತ್ರ ಜಾಲ (LAN) ಇದರ ಮೂಲಕ ಈ ಕೆಳಗಿನ ಯಾವುದನ್ನು ಕಾರ್ಯಾಲಯದಲ್ಲಿ ಹಂಚಿಕೊಳ್ಳಬಹುದು

A. ಮುದ್ರಕಗಳು/ಪ್ರಿಂಟರ್ಸ್
B. ಕೇಂದ್ರೀಕೃತ ಅಥವಾ ಸಾಮಾನ್ಯ ಗಣಕದಲ್ಲಿರುವ ಕಡತ/ಫೈಲ್ ಮತ್ತು ಫೋಲ್ಡರ್
C. ವ್ಯಕ್ತಿಗತ ಗಣಕಗಳಲ್ಲಿರುವ ಫೈಲ್, ಫೋಲ್ಡರ್‌ಗಳಲ್ಲಿ ಹಂಚಿಕೊಳ್ಳಬಹುದು ಎಂದು ಗುರುತಿಸಲ್ಪಟಿರುವುದು
D. ಎಲ್ಲಾ ಫೋಲ್ಡರ್‌ಗಳು ಮತ್ತು ಫೈಲುಗಳು

127. ಆಗಾಗ ಉಪಯೋಗಿಸುವ ಫೈಲ್‌ಗಳನ್ನು ಮತ್ತು ಅನ್ವಯಿಕಗಳನ್ನು ಸುಲಭವಾಗಿ ತೆರೆಯುವ ಉತ್ತಮ ವಿಧಾನ

A. ಡೆಸ್ಕ್ ಟಾಪ್‌ನಲ್ಲಿ ಶಾರ್ಟ್‌ಕಟ್ ಸೃಷ್ಟಿಸುವುದು
B. ವರ್ಡ್ ಡಾಕ್ಯೂಮೆಂಟ್‌ನಲ್ಲಿ ಹೆಸರನ್ನು ಸಂಗ್ರಹಿಸುವುದು (ಸೇವ್)
C. ಅವುಗಳನ್ನು ಸದಾಕಾಲ ತೆರೆದಿಡುವುದು
D. ಮೇಲಿನ ಎಲ್ಲವೂ ಹೌದು

128. ಯಾವ ಕಂಪೆನಿಯು ತನ್ನ ವೈಯಕ್ತಿಕ ಕಂಪ್ಯೂಟರ್ ವಿಭಾಗವನ್ನು ಚೈನಾ ಆಧಾರಿತ ಕಂಪನಿಗೆ ಮಾರಿದೆ

A. ವಿಪ್ರೊ
B. ಐ.ಬಿ.ಎಂ.
C. ಡೆಲ್
D. ಹ್ಯುಲೆಟ್ ಪ್ಯಾಕಾರ್ಡ್

129. ಭೂಮಿ, ಬಾಲಶ್ರಮ ಮತ್ತು ಮುಖ್ಯವಾಹಿನಿ ಇವುಗಳೆಲ್ಲಾ:
   A. ಕರ್ನಾಟಕದ ಗ್ರಾಮೀಣ ಅಭಿವೃದ್ಧಿ ಯೋಜನೆಗಳು
   B. ಇ–ಕಾರುಬಾರು ಯೋಜನೆಗಳು ಕರ್ನಾಟಕದಲ್ಲಿರುವಂತಹವು
   C. ವಿಶ್ವಬ್ಯಾಂಕ್‌ನಿಂದ ಹಣಕಾಸು ಪಡೆದ ಯೋಜನೆಗಳು
   D. ಮಕ್ಕಳ ಸಹಾಯವಾಣಿ

130. Raja@yahoo.com ಮತ್ತು Raja@gmail.com
   A. ಇವು ಒಬ್ಬರದೇ ಆದ ಎರಡು ID ಗಳು
   B. ಈಮೇಲ್ ಸೇವೆ ನೀಡುವ ಸಂಸ್ಥೆಗಳು ಉಚಿತವಾಗಿ ಆರಂಭಿಸಿರುವ ID ಗಳು, ಒಬ್ಬರಿಗೇನೆ ಸಂಬಂಧಿಸದೇ ಇರಬಹುದು
   C. ಎರಡು ಬೇರೆ ಬೇರೆ ಸರ್ವರ್‌ಗಳಿಂದ ಆರಂಭಿಸಲ್ಪಟ್ಟ ವೆಬ್‌ಸೈಟ್‌ಗಳು
   D. ಇವು ಯಾವುವೂ ಅಲ್ಲ

131. ನೀವು ಒಂದು ಈಮೇಲ್ ID ಇಂದ ಅನುಪಯುಕ್ತ ಮೇಲ್ ಬಹಳ ಬರುತ್ತಿದ್ದರೆ, ನೀವು ಸುಲಭವಾಗಿ ಇದರಿಂದ ಮುಕ್ತರಾಗಲು
   A. ಮೇಲ್ ಕಳಿಸುವವರ ID ಅನ್ನು ಬ್ಲಾಕ್ಡ್ ಸೆಂಡರ್ಸ್‌ಲಿಸ್ಟ್ ಗೆ ಸೇರಿಸಿರಿ
   B. ಸೈಬರ್ ಅಪರಾಧ ವಿಭಾಗಕ್ಕೆ ದೂರುನೀಡಿ
   C. ಈಮೇಲ್ ಬರುತ್ತಿದ್ದಂತೆ ತೆಗೆದುಹಾಕಿ
   D. ತಕ್ಷಣವೇ ಗಣಕಯಂತ್ರವನ್ನು ಆರಿಸಿಬಿಡಿ

132. ನೀವು ಹತ್ತು ಜನರಿಗೆ ಒಂದು ಮೇಲ್ ಶೀಘ್ರವಾಗಿ ಕಳಿಸಬೇಕಾಗಿದ್ದು, ಅದರಲ್ಲಿ ಒಬ್ಬರ ವಿಳಾಸ ಇನ್ನೊಬ್ಬರಿಗೆ ತಿಳಿಯಬಾರದೆಂದರೆ ಹೀಗೆ ಮಾಡಬೇಕು :
   A. ಪ್ರತಿಯೊಬ್ಬರಿಗೂ ಬೇರೆ ಬೇರೆಯ ಈಮೇಲ್ ಕಳುಹಿಸಿ
   B. ನಿಮಗೆ ನೀವೆ ಒಂದು ಈಮೇಲ್ ಕಳಿಸಿಕೊಂಡು ಹತ್ತು ಜನರಿಗೆ CC ಹಾಕಿರಿ
   C. ನಿಮಗೆ ನೀವೆ ಒಂದು ಈಮೇಲ್ ಕಳಿಸಿಕೊಂಡು ಹತ್ತು ಜನರಿಗೆ BCC ಹಾಕಿರಿ
   D. ಈಮೇಲ್ ಮುದ್ರಿಸಿ ಮತ್ತು ಅಂಚೆಸೇವೆಯನ್ನು ಉಪಯೋಗಿಸಿ

133. .pdf ಅಟ್ಯಾಚ್‌ಮೆಂಟ್ ಅನ್ನು ತೆರೆಯಲು ಯಾವ ಸಾಫ್ಟ್‌ವೇರ್ ಉಪಯೋಗಿಸಬೇಕು?
   A. ಎಂ.ಎಸ್. ವರ್ಡ್
   B. ಅಕ್ರೊಬ್ಯಾಟ್ ರೀಡರ್
   C. ಎಂ.ಎಸ್. ಪವರ್‌ಪಾಯಿಂಟ್
   D. ಎಂ.ಎಸ್. ಔಟ್‌ಲುಕ್

134. ಯಾವಾಗ ನಾವು ಇತರರಿಗೆ ಕಳಿಸಿದ ಈಮೇಲ್ 'ಬೌನ್ಸ್' ಆಗುತ್ತದೆ (ಹಿಂತಿರುಗುತ್ತದೆ)?
   A. ಈಮೇಲ್ ವಿಳಾಸ ಸರಿಯಿಲ್ಲದಿದ್ದಾಗ
   B. ಸ್ವೀಕರಿಸುವವರ ಈಮೇಲ್ ಬಾಕ್ಸ್ ತುಂಬಿರುವಾಗ
   C. ಸ್ವೀಕರಿಸುವವರ ಮೇಲ್ ಸರ್ವರ್ ಕೆಲಸ ಮಾಡದಿರುವಾಗ
   D. ಮೇಲಿನ ಎಲ್ಲವೂ ಹೌದು

135. ವರ್ಡ್ ಡಾಕ್ಯುಮೆಂಟ್‌ನಲ್ಲಿ ಕಡತವನ್ನು ಬೆರಳಚ್ಚು ಮಾಡುವಾಗ ನೀವು ಕೆಂಪು ಗುಂಗುರೀದ ಗೆರೆ ಕಂಡರೆ ನೀವು
   A. ಮುಂದಿನ ಸಾಲಿಗೆ ಆ ಪದವನ್ನು ಸೇರಿಸಬೇಕು
   B. ಕಾಗುಣಿತವನ್ನು ಪರೀಕ್ಷಿಸಿ
   C. ವ್ಯಾಕರಣವನ್ನು ಪರೀಕ್ಷಿಸಿ
   D. ಆ ಪದವನ್ನು ಅಳಿಸಿ ಹಾಕಿ, ಬೆರಳಚ್ಚು ಮಾಡುವುದನ್ನು ಮುಂದುವರಿಸಿ.

Adda247

136. ದೊಡ್ಡದಾದ ಡಾಕ್ಯುಮೆಂಟ್ ಅನ್ನು ಟೈಪ್ ಮಾಡಿದ ನಂತರ, ನೀವು ನಡುವಿನ ಒಂದು ಪದವನ್ನು ಶೀಘ್ರವಾಗಿ ನೋಡಲು/ ಹುಡುಕಲು, ನೀವು ಈ ಕೀಲಿಗಳನ್ನು ಉಪಯೋಗಿಸಬೇಕು:

A. ಪೇಜ್ ಅಪ್ ಮತ್ತು ಪೇಜ್ ಡೌನ್ ಕೀಲಿಗಳನ್ನು ಒತ್ತಿ ಮತ್ತು ಡಾಕ್ಯುಮೆಂಟ್‌ನಲ್ಲಿ ಪದವನ್ನು ನೋಡಬಹುದು

B. ಕಂಟ್ರೋಲ್(ctrl) + F ಕೀಲಿಗಳನ್ನು ಒಟ್ಟಿಗೆ ಒತ್ತಬೇಕು

C. ಕಂಟ್ರೋಲ್(ctrl) + S ಕೀಲಿಗಳನ್ನು ಒಟ್ಟಿಗೆ ಒತ್ತಬೇಕು

D. ಆಲ್ಟ್ (alt) + F ಕೀಲಿಗಳನ್ನು ಒಟ್ಟಿಗೆ ಒತ್ತಬೇಕು

137. ವರ್ಡ್ ಡಾಕ್ಯುಮೆಂಟ್ನಲ್ಲಿ ಯಾವ ತರಹದ ವಸ್ತುಗಳನ್ನು ಅಳವಡಿಸಬಹುದು

A. ವಿಡಿಯೊ ಮತ್ತು ಆಡಿಯೊ ಕಡತಗಳು (ದೃಶ್ಯ ಮತ್ತು ಶ್ರವ್ಯ ಕಡತಗಳು)

B. ಚಿತ್ರಗಳು ಮತ್ತು ಚಿಹ್ನೆಗಳು/ಸಂಕೇತಗಳು

C. ಚಾರ್ಟ್ ಮತ್ತು ಪಟ್ಟಿ/ಕೋಷ್ಟಕಗಳು

D. B ಮತ್ತು C ಮಾತ್ರ

138. ವರ್ಡ್ ಅಪ್ಲಿಕೇಶನ್‌ನಿಂದ ಡಾಕ್ಯುಮೆಂಟ್ ಅನ್ನು ಈಮೇಲ್ ಮಾಡಬೇಕಾದಲ್ಲಿ

A. ಫೈಲ್‌ಗೆ ಹೋಗಿ / ಸೆಂಡ್ ಟು / ಮೇಲ್ ರೆಸಿಪಿಯೆಂಟ್ ಮಾಡಿರಿ

B. ಫೈಲ್ ಅನ್ನು ಈಮೇಲ್ ಅಟ್ಯಾಚ್‌ಮೆಂಟ್ ಆಗಿ ಸೇವ್ ಮಾಡಿ

C. ಎಂ.ಎಸ್. ಔಟ್‌ಲುಕ್ ತೆಗೆದು ವರ್ಡ್ ಡಾಕ್ಯುಮೆಂಟ್ ತೆರೆದಿರುವಾಗಲೇ ಅಟ್ಯಾಚ್ ಮಾಡಿರಿ

D. ಈ ಕಾರ್ಯಾಚರಣೆ ಸಾಧ್ಯವಿಲ್ಲ

139. ಸ್ಪ್ರೆಡ್ ಷೀಟ್‌ನ 7 ಮತ್ತು 8 ನೇ ಸಾಲಿನ ನಡುವೆ ಮತ್ತೊಂದು ಸಾಲನ್ನು ಸೇರಿಸಿದಾಗ

A. ಅದಕ್ಕೆ ಹೊಸ ಸಾಲಿನ ಸಂಖ್ಯೆ ಇರುವುದಿಲ್ಲ

B. 7ನೇ ಸಾಲು ಆಗಿರುತ್ತದೆ

C. 7.5ನೇ ಸಾಲು ಆಗಿರುತ್ತದೆ

D. 8ನೇ ಸಾಲು ಆಗಿರುತ್ತದೆ

140. 75% ಎಂಬುದನ್ನು A5 ಸೆಲ್‌ನಲ್ಲಿ ನಮೂದಿಸಲು, ನೀವು ಮಾಡಬೇಕಾದುದು

A. A5 ನಲ್ಲಿ 75 ಟೈಪ್ ಮಾಡಿ ನಂತರ % ಚಿಹ್ನೆ ಒತ್ತಬೇಕು

B. A5 ನಲ್ಲಿ 0075 ಟೈಪ್ ಮಾಡಿ ನಂತರ % ಚಿಹ್ನೆ ಒತ್ತಬೇಕು

C. A5 ನಲ್ಲಿ .75 ಟೈಪ್ ಮಾಡಿ ನಂತರ % ಚಿಹ್ನೆ ಒತ್ತಬೇಕು

D. A5 ನಲ್ಲಿ 75/100 ಟೈಪ್ ಮಾಡಿ

141. A1 ಸೆಲ್‌ನಲ್ಲಿ ಜನವರಿ15 ಎಂದು ಟೈಪ್ ಮಾಡಿ, A5ರ ವರೆಗೆ ಎಳೆದಾಗ ನಿಮಗೆ ಇದು ಸಿಗುತ್ತದೆ

A. ಜನವರಿ15, ಫೆಬ್ರವರಿ15, ಮಾರ್ಚ್ 15, ಏಪ್ರಿಲ್ 15, ಮೇ 15

B. ಜನವರಿ15, ಜನವರಿ16, ಜನವರಿ 17, ಜನವರಿ18, ಜನವರಿ19

C. ಜನವರಿ15, ಫೆಬ್ರವರಿ16, ಮಾರ್ಚ್17, ಏಪ್ರಿಲ್18, ಮೇ19

D. ಜನವರಿ15, ಜನವರಿ15, ಜನವರಿ15, ಜನವರಿ15, ಜನವರಿ15

142. ಶೀಘ್ರವಾಗಿ ಒಂದು ಸಾಲಿನ ಕಾಲಂನ ಸಂಖ್ಯೆಗಳ ಮೊತ್ತವನ್ನು ಪಡೆಯಲು, ಕಾಲಂ ಕೆಳಗಿರುವ ಸೆಲ್ಲನ್ನು ಒತ್ತಿದ ನಂತರ

A. ಡಾಟಾ ಮೆನುವಿನಲ್ಲಿರುವ ಸಬ್–ಟೋಟಲ್ ಒತ್ತಬೇಕು

B. ಫಾರ್ಮುಲಾಬಾರ್‌ನಲ್ಲಿರುವ ಮೊತ್ತದ ಸೂಚಕವನ್ನು ನೋಡಬೇಕು

C. ಸ್ಟ್ಯಾಂಡರ್ಡ್ ಟೂಲ್‌ಬಾರ್‌ನಲ್ಲಿರುವ ಆಟೋಸಮ್ ಒತ್ತಿ ನಂತರ ಎಂಟರ್ ಒತ್ತಬೇಕು

D. ಈ ಮೇಲಿನವೂ ಯಾವುವು ಅಲ್ಲ

143. A6 ನೇ ಸೆಲ್‌ನಲ್ಲಿ ಪೂರ್ಣ ಸಂಬಳವಿದ್ದು, B6 ನಲ್ಲಿ ಕಡಿತಗಳಿದ್ದು, C6 ಸೆಲ್‌ನಲ್ಲಿ ನಿವ್ವಳ ಸಂಬಳ ಪಡೆಯಲು, C6 ನಲ್ಲಿ ಯಾವ ಫಾರ್ಮುಲವನ್ನು ಟೈಪ್ ಮಾಡಬೇಕು?

A. A6-B6 B. (A6-B6) C. -A6-B6 D. =A6-B6

144. ಅಕ್ಸೆಸ್ ನಲ್ಲಿರುವ ಫೈಲ್ ಗೆ ಈ ಎಕ್ಸ್‌ಟೆನ್ಷನ್ ಇರುತ್ತದೆ

A. .adp B. .xml C. .mdb D. .acc

145. ಹತ್ತು ಅಕ್ಷರಗಳನ್ನು ಮುದ್ರಿಸುವ ಸೆಲ್‌ನಲ್ಲಿ 16 ಅಕ್ಷರಗಳನ್ನು ಮುದ್ರಿಸಿದರೆ (ಟೈಪ್ ಮಾಡಿದರೆ)

A. ಆ ಪದವು ದೊಡ್ಡದಾಗಿದೆ ಎಂಬ ದೋಷದ ಸಂದೇಶ ಬರುತ್ತದೆ

B. ಕೇವಲ ಹತ್ತು ಅಕ್ಷರಗಳು ಮಾತ್ರ ಸೆಲ್‌ನಲ್ಲಿ ಗೋಚರವಾಗುತ್ತದೆ

C. ಎಲ್ಲಾ 16 ಅಕ್ಷರಗಳು ಕಾಣಿಸುತ್ತವೆ ಆದರೆ 6 ಅಕ್ಷರಗಳು ಮುಂದಿನ ಸೆಲ್‌ನಲ್ಲಿರುವಂತೆ ಕಾಣಿಸುತ್ತವೆ

D. ಕಡೆಯ 6 ಅಕ್ಷರಗಳು ಕಡಿತಗೊಂಡು ಮುಂದಿನ ಸೆಲ್‌ನಲ್ಲಿರುತ್ತವೆ

146. ಪವರ್ ಪಾಯಿಂಟ್ ಪ್ರೆಸೆಂಟೇಶನ್‌ಗಳು ಇವುಗಳಿಂದ ಮಾಡಲ್ಪಟ್ಟಿದೆ

A. ಫ್ರೇಮ್ಸ್ B. ಸ್ಕ್ರೀನ್ಸ್ C. ಪೇಜಸ್ D. ಸ್ಲೈಡ್ಸ್

147. ಪವರ್ ಪಾಯಿಂಟ್‌ನಲ್ಲಿ ಸ್ಪೆಲ್ ಚೆಕ್ ಎಂಬುದು ಇದರಲ್ಲಿರುತ್ತದೆ.

A. ಹೋಮ್ ಮೆನುವಿನಲ್ಲಿರುತ್ತದೆ B. ಸ್ಲೈಡ್ ಷೊ ಮೆನುವಿನಲ್ಲಿರುತ್ತದೆ

C. ರೆವ್ಯುಮೆನುವಿನ ಭಾಗವಾಗಿರುತ್ತದೆ D. ಎಲ್ಲೂ ದೊರೆಯುವುದಿಲ್ಲ

148. ಒಂದು ಸೆಟ್ ಸ್ಲೈಡನ್ನು ಸೃಷ್ಟಿಸಿದ ನಂತರ ಅವುಗಳ ವರ್ಣಸಂಕುಲವನ್ನು(colour combination) ಬದಲಿಸಬೇಕಾದಲ್ಲಿ

A. ಪ್ರತಿ ಸ್ಲೈಡ್‌ನ ವರ್ಣಸಂಕುಲವನ್ನು ಬದಲಿಸಬೇಕು

B. ಡಿಸೈನ್ ಟೆಂಪ್ಲೇಟ್ಸ್‌ನಿಂದ ವರ್ಣಸಂಕುಲವನ್ನು ಆಯ್ದುಕೊಳ್ಳಬಹುದು

C. ಪೇಜ್ ಸೆಟ್‌ಅಪ್ ಅನ್ನು ಉಪಯೋಗಿಸಬಹುದು

D. ಇವು ಯಾವುವೂ ಸಾಧ್ಯವಿಲ್ಲ

149. ಪವರ್ ಪಾಯಿಂಟ್ ಪ್ರೆಸೆಂಟೇಶನ್‌ನಲ್ಲಿ ಸ್ಲೈಡ್ ಸಂಖ್ಯೆಗಳು

A. ತಾನಾಗಿಯೇ ವ್ಯಕ್ತವಾಗಿ ಕಾಣುತ್ತವೆ

B. ಪ್ರತಿ ಸ್ಲೈಡ್‌ನ ನಂತರ ನಾವು ಸ್ವತ: ನಮೂದಿಸಬೇಕು

C. ಫೂಟರ್ ಆಯ್ಕೆಯ ಮೂಲಕ ಎಲ್ಲ ಸ್ಲೈಡ್‌ಗಳಿಗೆ ಸೇರಿಸಬಹುದು

D. ನಮೂದಿಸಲು ಸಾಧ್ಯವಿಲ್ಲ

150. ಪೇಸ್ಟ್ ಮತ್ತು ಪೇಸ್ಟ್ ಸ್ಪೆಷಲ್ ನ ವ್ಯತ್ಯಾಸವೇನೆಂದರೆ

A. ಪೇಸ್ಟ್ ಎಂಬುದನ್ನು ಪದಗಳಿಗೆ ಮಾತ್ರ ಉಪಯೋಗಿಸಬಹುದು ಆದರೆ ಪೇಸ್ಟ್ ಸ್ಪೆಷಲ್ ಎಂಬುದನ್ನು ಹಲವಾರು ಡಾಟಾಗಳಿಗೆ ಉಪಯೋಗಿಸಬಹುದು

B. ಪೇಸ್ಟ್ ಅನ್ನು ಸಮ ಪ್ರಮಾಣದ (exact) ಪದಗಳನ್ನು ಕಾಪಿ ಮಾಡಲು ಉಪಯೋಗಿಸಬಹುದು ಆದರೆ ಪೇಸ್ಟ್ ಸ್ಪೆಷಲ್ ಅನ್ನು ಪೂರ್ಣವಾಗಿ ಅದರ ರೂಪವನ್ನು (format) ಬದಲಿಸಲು ಉಪಯೋಗಿಸಬಹುದು

C. ಪೇಸ್ಟ್ ಅನ್ನು ಯಾವುದೇ ಒಂದು ಅಪ್ಲಿಕೇಶನ್‌ನಲ್ಲಿ ಉಪಯೋಗಿಸಬಹುದು ಆದರೆ ಪೇಸ್ಟ್ ಸ್ಪೆಷಲ್ ಅನ್ನು ಒಂದು ಅಪ್ಲಿಕೇಶನ್‌ನಿಂದ ಇತರ ಅಪ್ಲಿಕೇಶನ್‌ಗಳಿಗೆ ಡಾಟಾ ಕಾಪಿ ಮಾಡಲು ಉಪಯೋಗಿಸಬಹುದು

D. ಮೇಲಿನ ಎಲ್ಲವೂ ಹೌದು